ರತ್ನಾಕರ ಗೌಂಡಿ ಸಾರಥ್ಯದಲ್ಲಿ

PANCHAYAT SWARAJ SAMACHAR
BILINGUAL FORTNIGHTLY

Volume: 03 || Issue: 32 || 16-August-2024 || Pages: 08 || Price: 15/-

78 ನೇ ಸ್ವಾತಂತ್ರ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳು

RNI NO: KARBIL/2022/83794

# ಪಂಚಾಯತ್ ಸ್ವರಾಜ್ ಸಮಾಚಾರ

पंचायत स्वराज समाचार वृत्तपत्र

ಪಾಕ್ಷಿಕ ಪತ್ರಿಕೆ

PANCHAYAT SWARAJ SAMACHAR panchayatswarajsamachar2022@gmail.com
Contact-8431449785

ಕರ್ನಾಟಕ ರಾಜ್ಯದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ ವಿಜೇತ

ಶ್ರೀಮಾತಾ

ಕೋ-ಆಪ. ಕ್ರೆಡಿಟ್ ಸೊಸೈಟಿ ಲಿ.,

(ಬಹು ರಾಜ್ಯ)

ಪ್ರಧಾನ ಕಾರ್ಯಾಲಯ. ; ನ್ಯೂ ಗೂಡ್ಸ್ ಶೆಡ್ ರೋಡ್, ಬೆಳಗಾವಿ

ನೋಂ.ಸಂಖ್ಯೆ:ಎಮ್ಎಸ್‌ಸಿಎಸ್/ಸಿಆರ್.270/2008/ಸ್ಥಾಪನೆ:೧೯೯೩ ದೂರವಾಣಿ: 2405120, 22

(ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ)

ಠೇವುಗಳ ಮತ್ತು ಸಾಲಗಳ ಮೇಲೆ ಅತ್ಯಾಕರ್ಷಕ ಬಡ್ಡಿ ದರಗಳು,
ಇ-ಸ್ಟ್ಯಾಂಪಿಂಗ್, ಕೋರ ಬ್ಯಾಂಕಿಂಗ, ಎಸ್ ಎಂ ಎಸ್ / ಮೊಬೈಲ್ ಬ್ಯಾಂಕಿಂಗ, ಡೊಮೆಸ್ಟಿಕ್ ಮನೀ ಟ್ರಾನ್ಸಫರ್, RTGS, NEFT, EBIX ಮನಿ ಟ್ರಾನ್ಸಫರ್, ಆನಲೈನ್ ಮನಿ ಟ್ರಾನ್ಸಫರ್ ಇತ್ಯಾದಿ ಸೇವೆಗಳಿಗೆ ಹತ್ತಿರದ ಶಾಖೆಯನ್ನು ಸಂಪರ್ಕಿಸಿರಿ

@@ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಶಾಖೆಯನ್ನು ಸಂಪರ್ಕಿಸಿರಿ @@

Come Once ===== Stay Forever

ಶ್ರೀ ಮನೋಹರ ದೇಸಾಯಿ — ಸಂಸ್ಥಾಪಕ- ಅಧ್ಯಕ್ಷರು
ಶ್ರೀ ಸಂಜೀವ ಧನಪಾಲ ನೇಗಿನಹಾಳ — ಉಪಾಧ್ಯಕ್ಷರು
ಶ್ರೀ ಮಹೇಶ. ಚ. ಸ್ತ್ರದ, B.com.LLB.(spl) — ಪ್ರಧಾನ ವ್ಯವಸ್ಥಾಪಕ

ಹಾಗೂ ನಿರ್ದೇಶಕ ಮಂಡಳಿ

## ಕಂಪ್ಲಿ:ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ




ಕಂಪ್ಲಿ(ಬಳ್ಳಾರಿ ಜಿಲ್ಲೆ):– ಆ.21 ರಂದು ನಡೆಯಬೇಕಿದ್ದ ಕಂಪ್ಲಿ ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಧಾರವಾಡ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ವಿಚಾರಣೆಯನ್ನು ಆ. 28 ಕ್ಕೆ ಮುಂದೂಡಿದೆ.

ಪುರಸಭೆಯ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳಾ ವರ್ಗಕ್ಕೆ ಮೀಸಲಾಗಿದ್ದು, ಸರದಿ (ರೊಟೇಷನ್ ಪ್ರಕಾರ) ಪ್ರಕಾರ ಪುರಸಭೆ ಅಧ್ಯಕ್ಷ ಸ್ಥಾನ ಪರಿಶಿಷ್ಟ ವರ್ಗಕ್ಕೆ ಮೀಸಲು ನಿಗಧಿಯಾಗಬೇಕಿತ್ತೆಂದು ಪುರಸಭೆಯ ಸದಸ್ಯ ಎನ್.ರಾಮಾಂಜಿನೇಯಲು ಧಾರವಾಡ ಹೈಕೋರ್ಟ್‌ಗೆ ಸೂಕ್ತ ದಾಖಲೆಗಳನ್ನು ಸಲ್ಲಿಸಿದ್ದರು.

ದಾಖಲೆಗಳನ್ನು ಪರಿಶೀಲಿಸಿದ ಧಾರವಾಡ ಹೈಕೋರ್ಟ್ ಪೀಠ ಆ.21 ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ತಡೆಯಾಜ್ಞೆ ನೀಡಿ ವಿಚಾರಣೆಯನ್ನು ಆ.28ಕ್ಕೆ ಮುಂದೂಡಿದೆ.

ಕಳೆದ 17 ತಿಂಗಳುಗಳಿಂದ ಪುರಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರವಿಲ್ಲದೇ ನಿರಾಶರಾಗಿದ್ದ ಸದಸ್ಯರುಗಳಿಗೆ ಸರ್ಕಾರ ಇತ್ತೀಚೆಗೆ ಮೀಸಲಾತಿ ಆದೇಶ ಅಧ್ಯಕ್ಷ, ಉಪಾಧ್ಯಕ್ಷ ಆಕಾಂಕ್ಷಿಗಳಿಗೆ ಸಂತಸವನ್ನು ತಂದಿದ್ದು, ರಾಜಕೀಯ ಚಟುವಟಿಕೆಗಳು ಗರಿಗೆದರಿದ್ದವು. ಆದ–'ರೆ ಧಾರವಾಢ ಹೈಕೋರ್ಟ್ ಪೀಠ ನೀಡಿರುವ ತಡಯಾಜ್ಞೆ ಅವರಿಗೆ ಆಶಾಭಂಗವನ್ನುಂಟು ಮಾಡಿದೆ.

Atif Maniyar
Prop.

LF DECORATOR

Asif : 9900961321
9481491321
8792515590

Little Flower
DECORATOR
we decor your dreams

All Kinds of flower Decoration for all Occasions & Event Management



# 535/1,Sec. No.3, Samsuddi Complex, Main Road, Near SBI Bank, Shivabasav Nagar, Belgaum-590010.

## ಗ್ರಾ.ಪಂ ಕಚೇರಿಗಳ ಮೇಲೆ ಲೋಕಾ ದಾಳಿ!



ನೆಲಮಂಗಳ:– ನೆಲಮಂಗಲ ಗ್ರಾಮ ಪಂಚಾಯತಿ ಕಚೇರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ನೆಲಮಂಗಲ ತಾಲೂಕಿನ ಬೂದಿಹಾಳ್ ಹಾಗೂ ದಾಸನಪುರ, ಅಡಕಮಾರನಹಳ್ಳಿ ಪಂಚಾಯತಿ ಮೇಲೆ ಲೋಕಾಯುಕ್ತ ಅಧಿಕಾ–ರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ.

ವಿವಿಧ ಅಧಿಕಾರಿಗಳ ನೇತೃತ್ವದಲ್ಲಿ 30ಕ್ಕೂ ಹೆಚ್ಚು ಅಧಿಕಾರಿಗಳ ತಂಡ ದಾಳಿ ಮಾಡಿ ಪರಿಶೀಲನೆ ನಡೆಸಿದೆ. ಖುದ್ದು ಮುಖ್ಯ ಲೋಕಾಯುಕ್ತ ಬಿ.ಎಸ್ ಪಾಟೀಲ್ ನೇತೃತ್ವದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ. ನಾಲ್ಕೈದು ಗ್ರಾಮ ಪಂಚಾಯತಿ ಕಚೇ–ರಿಗಳ ಮೇಲೆ ಲೋಕಾಯುಕ್ತ ಅಧಿಕಾ–ರಿಗಳು ಹಲವು ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

ಅಕ್ರಮ ಖಾತೆ ಸೇರಿದಂತೆ ಪದೇ ಪದೇ ಗ್ರಾಮ ಪಂಚಾಯಿತಿಗಳ ಮೇಲೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳ ಮೇಲೆ ಉಪ ಲೋಕಾಯುಕ್ತ ನ್ಯಾ.ಬಿ. ವೀರಪ್ಪ ನೇತೃತ್ವದಲ್ಲಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಕಸಘಟ್ಟಪುರ, ರಾಜಾನುಕಂಟೆ, ಬನ್ನೇರುಘಟ್ಟ, ಕಲ್ಲುಬಾಳು, ಕಣ್ಣೂರು, ಮಂಡೂರು, ಕಂಬಳಗೋಡು, ಆಗರ, ದಾಸನಪುರ ಮತ್ತು ಅಡಕಮಾರನಹಳ್ಳಿ ಗ್ರಾ.ಪಂ. ಕಚೇರಿ ಮೇಲೆ ದಾಳಿ ನಡೆಸಿ ಅಧಿಕಾರಿಗಳಿಂದ ಪಂಚಾಯತಿಗಳಲ್ಲಿನ ಇ–ಖಾತಾ, ಟ್ಯಾಕ್ಸ್ ಕಲೆಕ್ಷನ್ ಲೆಡ್ಜರ್ ಸೇ–ರಿದಂತೆ ಹಲವು ದಾಖಲೆಗಳ ಪರಿಶೀಲನೆ ನಡೆಸಿದ್ದಾರೆ.

ದೇವನಹಳ್ಳಿ ಕಂದಾಯ ಇಲಾಖೆಯ ಸಿಬ್ಬಂದಿಯೊಬ್ಬ ಲಂಚ ಪಡೆಯುತ್ತಿದ್ದಾ ಸಿಕ್ಕಿಬಿದ್ದು ಪಾರಾರಿಯಾಗಿದ್ದಾನೆ. ಬುಧವಾರ ಲೋಕಯುಕ್ತ ಪೊಲೀಸರು ದಾಳಿ ವೇಳೆ ಸಿಬ್ಬಂದಿ ಹಣದ ಸಮೇತ ಪರಾ–ರಿಯಾದ ಘಟನೆ ನಡೆದಿದೆ. ಲೋಕಾಯುಕ್ತ ಪೊಲೀಸರು ಆತನ ಬೆನ್ನಟ್ಟಿದ್ದರೂ ಅವರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ. ಆರೋಪಿಗಾಗಿ ಸದ್ಯ ಹುಡುಕಾಟ ಆರಂಭವಾಗಿದೆ.

ದೇವನಹಳ್ಳಿ ತಾಲೂಕಿನ ವೆಂಕಗಿರಿಕೋಟೆ ಬಳಿ ಪೆಟ್ರೋಲ್ ಬಂಕ್ ಆರಂಭಿಸಲು ಚಿಕ್ಕಬಳ್ಳಾಪುರದ ಜಯಸೂರ್ಯ ಎಂಬುವರು ಅಗತ್ಯ ಪರವಾನಗಿ ಪಡೆಯಲು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಕಂದಾಯ ಇಲಾಖೆಯ ವಿಷಯ ನಿರ್ವಾಹಕ ಅಧಿಕಾರಿ ಮಹೇಶ್, ಜಯಸೂರ್ಯ ಅವ–ರಿಗೆ 2.50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಜಯಸೂರ್ಯ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಜಯಸೂರ್ಯ ಬುಧವಾರ ಮುಂಗಡವಾಗಿ ಹಣ ನೀಡಲು ಕಂದಾಯ ಇಲಾಖೆಗೆ ಬಂದಿದ್ದರು. ಮಹೇಶ್ ಹಣ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದರು. ಇದು ಗಮನಕ್ಕೆ ಬರುತ್ತಿದ್ದಂತೆ ಮಹೇಶ್ ಹಣದ ಸಮೇತ ಕಚೇರಿಯಿಂದ ಕಾಲ್ಕಿತ್ತಿದ್ದಾರೆ.

## ನಗರಸಭೆ, ಪುರಸಭೆ ಪಟ್ಟಣ ಪಂ.ಚುನಾವಣೆ ಉಸ್ತುವಾರಿಗಳನ್ನು ನೇಮಿಸಿದ ಬಿಜೆಪಿ




ಬೆಂಗಳೂರು:– ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಘೋಷಣೆಯಾಗುತ್ತಿರುವ ಬೆನ್ನಲ್ಲೇ ಚುನಾವಣಾ ಪ್ರಕ್ರಿಯೆಗೆ ಬಿಜೆಪಿ ಉಸ್ತುವಾರಿಗಳ ನೇಮಕ ಮಾಡಲಾಗಿದೆ. ಆ ಮೂಲಕ ಚುನಾವಣೆ ಘೋಷಣೆಗೂ ಮುನ್ನವೇ ಬಿಜೆಪಿ ಚುನಾವಣಾ ಪ್ರಕ್ರಿಯೆ ಆರಂಭಿಸಲಿದೆ.

**ಉಸ್ತುವಾರಿಗಳ ಪಟ್ಟಿ ಹೀಗಿದೆ**

ಹಾವೇರಿ, ಹುಬ್ಬಳ್ಳಿ–ಧಾರವಾಡ, ಧಾರವಾಡ ಗ್ರಾಮಾಂತರ, ಗದಗ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ: ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್.

ಬೀದರ್, ಕಲಬುರಗಿ ನಗರ, ಕಲಬುರಗಿ ಗ್ರಾಮಾಂತರ ಮತ್ತು ಯಾದಗಿರಿಗೆ ರಾಜ್ಯ ಕಾರ್ಯದರ್ಶಿ ಡಾ. ಶೈಲೇಂದ್ರ ಬೆಲ್ದಾಳೆ

ಮೈಸೂರು, ಚಾಮರಾಜನಗರ ಮತ್ತು ಹಾಸನಕ್ಕೆ ರಾಜ್ಯ ಮುಖ್ಯ ವಕ್ತಾರ ಅಶ್ವಥ್ ನಾರಾಯಣ

ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿಗೆ ಮಾಜಿ ಎಂಎಲ್‌ಸಿ ಕ್ಯಾ. ಗಣೇಶ್ ಕಾರ್ಣಿಕ್.

ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು ಮತ್ತು ಮಧುಗಿರಿಗೆ ಎಂಎಲ್‌ಸಿ ಎನ್. ರವಿಕುಮಾರ್

ಬೆಳಗಾವಿ, ಚಿಕ್ಕೋಡಿ, ಬಾಗಲಕೋಟೆ ಮತ್ತು ವಿಜಯಪುರಕ್ಕೆ ಶಾಸಕ ಮಹೇಶ್ ಟೆಂಗಿನಕಾಯಿ

ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉತ್ತರಕನ್ನಡಕ್ಕೆ ಶಾಸಕ ಚನ್ನಬಸಪ್ಪ ಅವರನ್ನು ಉಸ್ತುವಾರಿಗಳಾಗಿ ನೇಮಕ ಮಾಡಲಾಗಿದೆ.ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಚುನಾವಣೆ ಸಂಬಂಧ ಇತ್ತೀಚೆಗೆ ರಾಜ್ಯ ಸರ್ಕಾರ ಮೀಸಲು ವರ್ಗೀಕರಣದ ಅಧಿಸೂಚನೆ ಪ್ರಕಟಿಸಿತ್ತು.

ಗ್ರಾಮದ ಗುರು ಹಿರಿಯರು ಕೂಡಿಕೊಂಡು ವಿಜಯಪುರ ತಾಲೂಕಿನ ಗುಣಕಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆಯನ್ನು ಮಾಡಿದ್ದಾರೆ. ಆ ಮೂಲಕ ವಿಜಯಪುರ ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಿದೆ. ಗುಣಕಿ ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸರ್ಕಾರದ ಅಧಿಸೂಚನೆಯಂತೆ ಮೀಸಲಾತಿ ಅನ್ವಯ ಹಿರಿಯರು ಯಾರಿಗೆ ಅಧಿಕಾರ ನೀಡಬೇಕೆಂದು ತೀರ್ಮಾನಿಸುತ್ತಾರೆ.

## ರಸ್ತೆ ದುರಸ್ತಿಗೊಳಸಿ

ಖಾನಾಪುರ:ತಾಲೂಕಿನಾದ್ಯಂತ ರಸ್ತೆಗಳೆಲ್ಲ ತುಂಬ ಹದಗೆಟ್ಟಿದ್ದು ರಸ್ತೆಗಳ ತುಂಬೆಲ್ಲ ತಗ್ಗು ಗುಂಡಿಗಳೇ ತುಂಬಿವೆ ಇದರಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ ಈ ಕುರಿತಾಗಿ ಜನಪ್ರತಿನಿಧಿಗಳು ಮತ್ತು ಅಧಿಕಾ–ರಿಗಳಿಗೆ ಸಾಕಷ್ಟು ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗಿಲ್ಲ ಈಗ ಹದಿನೈದು ದಿನಗಳ ಒಳಗೆ ರಸ್ತೆ ಸರಿಪಡಿಸಬೇಕೆಂದು ತಾಲೂಕಿನ ಯುವಕರು ಆಗ್ರಹಿದ್ದಾರೆ.

ತಾಲೂಕಿನ ಸಿಂದನೂರು–ಹೆಮ್ಮಡಗಾ ರಾಜ್ಯ ಹೆದ್ದಾರಿ ಕಳೆದ ಹದಿನೈದು ವರ್ಷಗಳಿಂದ ಡಾಂಬರೀಕರಣ ಕಾಣದೆ ತುಂಬಾ ಹದೆಗಟ್ಟಿದೆ ಇದರಿಂದ ಸಾವು ನೋವು ಸಂಭವಿಸುತ್ತಿದೆ ಆದ್ದರಿಂದ ಕೂಡಲೇ ರಸ್ತೆ ರಿಪೇರಿ ಮಾಡುವಂತೆ ಇಟಗಿ, ಬೇಡರಹಟ್ಟಿ, ಬೋಗೂರು ಗ್ರಾಮದ ಗ್ರಾಮಸ್ಥರು, ಯುವಕರು ತಹಶಿಲ್ದಾರ ಮೂಲಕ ಲೋಕೋಪಯೋಗಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗೆ ಮನವಿ ಮಾಡಿದ್ದಾರೆ. ಇಟಗಿ ಗ್ರಾಮದಲ್ಲಿ ಕಳೆದ 15 ವರ್ಷಗಳಿಂದ ರಸ್ತೆ ದುರಸ್ತಿ, ಡಾಂಬ–ರೀಕರಣ ನಡೆದಿಲ್ಲ, 2019ರ ಅತಿವೃಷ್ಟಿಯಿಂದ ಪ್ರವಾಹ ಉಂಟಾಗಿತ್ತು. ಆಗ ಇದ್ದ ಚಿಕ್ಕ ರಸ್ತೆ ಹಾಳಾಗಿ ಗುಂಡಿಗಳು ಬಿದ್ದಿವೆ. ಇಟಗಿ ಗ್ರಾಮ ಸುಮಾರು 25,000ಜನಸಂಖ್ಯೆ ಹೊಂದಿದ್ದು. ಸುಮಾರು 10 ರಿಂದ 15 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ.

## ರಂಗೇರಿದ ಚಿಕ್ಕಬಳ್ಳಾಪುರ ಲೋಕಲ್ ಕಣ




ಗುಡಿಬಂಡೆ :–ರಾಜ್ಯ ಸೇರಿ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಕೊನೆಗೂ ಮೀಸಲು ಬಿಡುಗಡೆಯಾಗಿದೆ. ಸರಕಾರ ಸೋಮವಾರ ಮೀಸಲು ಪಟ್ಟಿ ಬಿಡುಗಡೆಗೊಳಿಸಿದ್ದು, ನಗರಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಮುಹೂರ್ತ ನಿಗದಿ ಮಾಡಿದ್ದು ಎಲ್ಲೆಡೆ ಆಕಾಂಕ್ಷಿಗಳು ರಾಜ–ಕೀಯ ಹಾವು ಏಣಿ ಆಟಕ್ಕೆ ಮುಂದಾಗಿದ್ದಾರೆ. ಗುಡಿಬಂಡೆ ಪಟ್ಟಣ ಪಂಚಾಯಿತಿಯ 2ನೇ ಅವಧಿಯ ಅಧ್ಯಕ್ಷ ಸ್ಥಾನದ ಮೀಸಲಾತಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು ಕಾಂಗ್ರೆಸ್, ಜೆಡಿಎಸ್ ಹಾಗೂ ಪಕ್ಷೇತರ ಸದಸ್ಯರು ಅಧ್ಯಕ್ಷ ಗಾದಿಗಾಗಿ ಪೈಪೋಟಿಗೆ ಇಳಿದಿದ್ದರೆ, ಕಳೆದ 30 ವರ್ಷಗಳಿಂದ ಎಸ್.ಟಿ ಮಹಿಳೆಗೆ ಅಧ್ಯಕ್ಷರಾಗುವ ಅವಕಾಶ ಸಿಕ್ಕಿಲ್ಲದ ಕಾರಣ ಮೀಸಲಾತಿ ಮರು ಪರಿಶೀಲನೆಗಾಗಿ ನ್ಯಾಯಾಲಯದ ಮೊರೆ ಹೋಗಲು ಪಕ್ಷೇತರ ಅಭ್ಯರ್ಥಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

2021 ರಿಂದ 2024 ರ ಅವಧಿಯ ಅಧಿಕಾರ ಅವಧಿಯಲ್ಲಿ ನಡೆದ ರಾಜ–ಕೀಯ ಹೈ ಡ್ರಾಮದಲ್ಲಿ ಅಂದು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಬಿಜೆಪಿ ಸರಕಾರದ ಅರೋಗ್ಯ ಸಚಿವ ಡಾ. ಕೆ. ಸುಧಾಕರ್ ರವರನ್ನು ಬೆಂಬಲಿಸಿದ್ದ ಕೆಲ ಸದಸ್ಯರು ಬಿಜೆಪಿ ಬೆಂಬಲದೊಂದಿಗೆ ಬಿ. ಸಿ.ಎಂ ( ಎ ) ಮಹಿಳೆಗೆ ನಿಗದಿಯಾಗಿದ್ದ ಮೀಸಲಾತಿ ಮೂಲಕ 7ನೇ ವಾರ್ಡ್ ಸದಸ್ಯೆ ಬಷೀರಾ ರಿಜ್ವಾನ್ ಅಧ್ಯಕ್ಷರಾಗಿ ಅಧಿಕಾರ ಗಿಟ್ಟಿಸಿಕೊಂಡಿದ್ದರು, ನಂತರ ನಡೆದ ಅವಿಶ್ವಾಸ ಮಂಡನೆ, ರಾಜೀನಾಮೆ ಪ್ರಹಸನ ಹಾಗೂ ರಾಜಕೀಯ ಬೆಳವಣಿಗೆಯಲ್ಲಿ ರಾಜೀನಾಮೆ ನೀಡಿ ಕಾಂಗ್ರೆಸ್ ಬಿಂಬಲಿಸಿದ್ದರು, ನಂತರ 10ನೇ ವಾರ್ಡ್ ಸದಸ್ಯೆ ನಗೀನ್ ತಾಜ್ ರವರಿಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಲಾಗಿತ್ತು. ಈಗಲೂ ಮತ್ತೆ ಕಾಂಗ್ರೆಸ್ ಸದಸ್ಯರ ಬಲಾ ಬಲದಿಂದ ಆಡಳಿತಾರೂಢ ಪಕ್ಷದ ಸದಸ್ಯರೇ ಚುಕ್ಕಾಣಿ ಹಿಡಿಯಲು ಭಾರಿ ಪೈಪೋಟಿ ಎದುರಾಗಲಿದೆ. ಪಕ್ಷೇತರ ಸದಸ್ಯರೊಬ್ಬರು ಕಳೆದ 30 ವರ್ಷಗಳ ಮೀಸಲಾತಿ ಪಟ್ಟಿ ಹಿಡಿದು ಮುಂದಿನ ಮೀಸಲಾತಿ ಬಗ್ಗೆ ತಮ್ಮದೆಯಾದ ಲೆಕ್ಕಾಚಾರದಲ್ಲಿ ನಿರತರಾಗಿದ್ದರು. ಮೀಸಲಾತಿ ರೋಸ್ಟರ್ ಹಾಗೂ ಪಟ್ಟಣದ ಜನಸಂಖ್ಯಾ ಆದಾರದಲ್ಲಿ ಈ ಬಾರಿ ಅಧ್ಯಕ್ಷ ಸ್ಥಾನ ಎಸ್.ಟಿ ಮಹಿಳಾ ಪರ ಬರಲಿದೆ ಎನ್ನುವ ಲೆಕ್ಕಾಚಾರದಲ್ಲಿ ತೊಡಗಿದ್ದರು. ಅಂತಿಮವಾಗಿ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ನಿಗದಿಯಾಗಿದ್ದು ನ್ಯಾಯಾಲಯದ ಮೊರೆ ಹೋಗುತ್ತಿದ್ದಾರೆಂದು ತಿಳಿದು ಬಂದಿದೆ.

ಗುಡಿಬಂಡೆ ಪಟ್ಟಣ ಪಂಚಾಯಿತಿಯಲ್ಲಿ 11 ಸದಸ್ಯರಿದ್ದು, ಕಾಂಗ್ರೆಸ್ –6, ಜೆಡಿಎಸ್–2, ಹಾಗೂ ಪಕ್ಷೇತರ–3 ಸದಸ್ಯರಿದ್ದಾರೆ. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ ಕಾರಣ ಆಡಳಿತಾರೂಢ ಕಾಂಗ್ರೆಸ್, ಜೆಡಿ–ಎಸ್, ಪಕ್ಷೇತರ ಸದಸ್ಯರು ಸಹ ಅಧ್ಯಕ್ಷ ಗಾದಿ ಮೇಲೆ ಕಣ್ಣಿಟ್ಟಿದ್ದು, ಪಕ್ಷೇತರ ಸದಸ್ಯರಾದ 2ನೇ ವಾರ್ಡಿನ ಜಿ. ರಾಜೇಶ್, 9ನೇ ವಾರ್ಡಿನ ಪಕ್ಷೇತರ ಸದಸ್ಯೆ ವೀಣಾ ನಿತಿನ್ ಸೇರಿದಂತೆ ಹಲವರು ಅಧ್ಯಕ್ಷ ಸ್ಥಾನದ ರೇಸ್ ನಲ್ಲಿ ಹೆಸರು ಕೇಳಿಬರುತ್ತಿದೆ.

ವರ್ಷ 1990 ರಿಂದ 1995 ರವರೆಗೆ ನಿಗದಿಯಾಗಿದ್ದ ಬಿಸಿಎಂ (ಬಿ ) ಮೀಸಲಾತಿಯಲ್ಲಿ ಅಧ್ಯಕ್ಷರಾಗಿ ವಿ. ಅಶ್ವತ್ತಪ್ಪ, 1996–2001 ರ ಅವಧಿಯ ಮೊದಲ ಅವಧಿಯಲ್ಲಿ ಬಿ.ಸಿ.ಎಂ (ಬಿ) ನಾಗರಾಜು, ಎರಡನೇ ಅವಧಿಯಲ್ಲಿ ಸಾಮಾನ್ಯ ಮಹಿಳೆ ಗೆ ನಿಗಧಿಯಾಗಿದ್ದ ಮೀಸಲಾತಿಯಲ್ಲಿ ಇಷಾರತ್ ಅಪ್ಜ, 2002 ರಿಂದ 2007 ರ ಅವಧಿಯ ಮೊದಲ ಅವಧಿಯಲ್ಲಿ ಸಾಮಾನ್ಯ ಮೀಸಲಾತಿಯಡಿ ಎ. ನಾಗರಾಜು ಹಾಗೂ ಎರಡನೇ ಅವಧಿಯಲ್ಲಿ ಬಿ.ಸಿ.ಎಂ (ಬಿ) ಮೀಸಲಾತಿಯಲ್ಲಿ ಎ. ನಾಗರಾಜು ಪುನರ್ ಆಯ್ಕೆಯಾದ್ದರು. 2008 ರಿಂದ 2013 ರ ಅವಧಿಯಲ್ಲಿ ಪ. ಜಾತಿ ಮಹಿಳೆಗೆ ನಿಗಡಿಯಾಗಿದ್ದ ಮೀಸಲಾತಿಯಡಿ ಚನ್ನಮ್ಮ, ಎರಡನೇ ಅವಧಿಯಲ್ಲಿ ಬಿಸಿಎಂ (ಎ) ಮಹಿಳೆಗೆ ನಿಗದಿಯಾಗಿದ್ದ ಮೀಸಲಾತಿಯಡಿ ಜಬೀನ್ ತಾಜ್ ಅಧ್ಯಕ್ಷರಾಗಿದ್ದರು. 2014 ರಿಂದ 2018 ರ ಅವಧಿಯಲ್ಲಿ ಬಿಸಿಎಂ (ಎ) ನಿಗದಿಯಾಗಿದ್ದು ರಿಯಾಜ್ ಪಾಷಾ ಮತ್ತು ಅಪ್ಸರ್ ಪಾಷಾ ಅಧಿಕಾರ ವಹಿಸಿಕೊಂಡಿದ್ದರು, ಎರಡನೇ ಅವಧಿಯಲ್ಲಿ ಸಾಮಾನ್ಯ ವರ್ಗಕ್ಕೆ ಸಿಕ್ಕ ಅವಕಾಶದಲ್ಲಿ ಚಂದ್ರಶೇಖರ್ ನಾಯ್ಡು ಹಾಗೂ ದ್ವಾರಕನಾಥ ನಾಯ್ಡು ಅಧಿಕಾರ ಹಂಚಿಕೊಂಡು ಅಧ್ಯಕ್ಷರಾಗಿದ್ದರು.

# ಮೈಸೂರಿನ ನಾಲ್ಕು ಪಟ್ಟಣ ಪಂಚಾಯ್ತಿ ಅಧ್ಯಕ್ಷ – ಉಪಾಧ್ಯಕ್ಷರ ಮೀಸಲು ಪ್ರಕಟ

ಮೈಸೂರು: ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ– ಉಪಾಧ್ಯಕ್ಷರ ಆಯ್ಕೆಗೆ ಮೀಸಲು ನಿಗದಿಪಡಿಸಿ ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದ್ದು, ಹೊಸದಾಗಿ ಮೇಲ್ದರ್ಜೆಗೇರಿರುವ ಜಿಲ್ಲೆಯ ನಾಲ್ಕು ಹೊಸ ಪಟ್ಟಣ ಪಂಚಾಯಿತಿ ಹಾಗೂ ಒಂದು ನಗರಸಭೆಗೆ ಚುನಾವಣೆ ನಡೆಸುವ ಮುನ್ನವೇ ಅಧ್ಯಕ್ಷ–ಉಪಾಧ್ಯಕ್ಷರ ಮೀಸಲನ್ನು ಪ್ರಕಟಿಸಿದೆ. ಜಿಲ್ಲೆಯ ನಾಲ್ಕು ಹೊಸ ಪಟ್ಟಣ ಪಂಚಾಯಿತಿಗಳಾದ ರಮ್ಮನಹಳ್ಳಿ, ಶ್ರೀರಾಂಪುರ, ಕಡಕೊಳ ಹಾಗೂ ಬೋಗಾದಿ ಗ್ರಾಪಂನಿಂದ ಮೇಲ್ದರ್ಜೆಗೇರಿ ಎರಡು ವರ್ಷ ಕಳೆದರೂ ಚುನಾವಣೆ ನಡೆಸಿಲ್ಲ. ಹಾಗಾಗಿ ಅಲ್ಲಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿತ್ತು.ಅದೇ ರೀತಿ ಪಟ್ಟಣ ಪಂಚಾಯಿತಿಯಿಂದ ಹೂಟಗಳ್ಳಿ ನಗರಸಭೆಯಾಗಿ ಮೇಲ್ದರ್ಜೆಗೇರಿಸಲಾಗಿತ್ತು. ಅಲ್ಲದೆ, ಬೇರೆ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆಗಳ ಅಧ್ಯಕ್ಷ – ಉಪಾಧ್ಯಕ್ಷರ ಮೀಸಲು ಪ್ರಕಟಿಸದೆ ಇದ್ದಿದ್ದರಿಂದ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರು. ಹೀಗಾಗಿ, ನ್ಯಾಯಾಲಯದ ಆದೇಶದಂತೆ ಚುನಾವಣೆ ನಡೆದಿರುವ ಮತ್ತು ಚುನಾವಣೆ ನಡೆಯದೆ ಇರುವ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ – ಉಪಾಧ್ಯಕ್ಷರ ಮೀಸಲನ್ನು ಪ್ರಕಟಿಸಿ ರಾಜ್ಯ ಸರಕಾರ ಆದ–'ಶ ಹೊರಡಿಸಿದೆ.ಇದೀಗ ರಾಜ್ಯ ಸರಕಾರ ಮೀಸಲು ಪ್ರಕಟಿಸಿರುವ ಹಿನ್ನೆಲೆಯಲ್ಲಿ ರಮ್ಮನಹಳ್ಳಿ, ಶ್ರೀರಾಂಪುರ, ಕಡಕೊಳ ಹಾಗೂ ಬೋಗಾದಿ, ಸರಗೂರು ಸೇರಿದಂತೆ ಐದು ಪಟ್ಟಣ ಪಂಚಾಯಿತಿಗೆ ಹಾಗೂ ಹೂಟಗಳ್ಳಿ, ನಂಜನಗೂಡು, ಹುಣಸೂರು ನಗರಸಭೆಗಳಿಗೆ ಚುನಾವಣೆಗೆ ದಿನಾಂಕ ಪ್ರಕಟಿಸಬೇಕಿದೆ.

**ಸರಗೂರು ಪಟ್ಟಣ ಪಂಚಾಯ್ತಿ**

ಸರಗೂರು ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಸ್ಥಾನವನ್ನು ಬಿಸಿಎ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ವರ್ಗಕ್ಕೆ ಮೀಸಲಿಸರಿಲಾಗಿದೆ. ಕಳೆದ ಬಾರಿಯೂ ಸರಗೂರು ಪಪಂಗೆ ಇದೇ ಮೀಸಲು ಇತ್ತು. ಪಟ್ಟಣ ಪಂಚಾಯಿತಿಯಲ್ಲಿ ಒಟ್ಟು 12 ವಾರ್ಡ್‌ಗಳಿದ್ದು, ಕಳೆದ ಬಾರಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಬಿಜೆಪಿ ಪಾಲಾಗಿತ್ತು. ಬಿಜೆಪಿ 6, ಜೆಡಿಎಸ್ 3, ಕಾಂಗ್ರೆಸ್ 2 ಹಾಗೂ ಪಕ್ಷೇತರರು 1 ಸ್ಥಾನ ಪಡೆದಿದ್ದರು. ಅಧ್ಯಕ್ಷೆಯಾಗಿ ರಾಧಿಕಾ ಶ್ರೀನಾಥ್ ಹಾಗೂ ಉಪಾಧ್ಯಕ್ಷರಾಗಿ ವಿನಾಯಕ ಪ್ರಸಾದ್ ಅಧಿಕಾರ ನಡೆಸಿದ್ದರು.

**ಹುಣಸೂರು ನಗರಸಭೆ**

ಹುಣಸೂರು ನಗರಸಭೆ ಅಧ್ಯಕ್ಷ ಸ್ಥಾನವನ್ನು ಬಿಸಿಎ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಎಸ್‌ಟಿ ಮಹಿಳೆಗೆ ಮೀಸಲಿರಿಸಲಾಗಿದೆ. ಕಳೆದ ಬಾರಿ ಹುಣಸೂರು ನಗರಸಭೆಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಹಾಗೂ ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಮೀಸಲಿತ್ತು. ನಗರಸಭೆಯಲ್ಲಿಒಟ್ಟು 31 ವಾರ್ಡ್ ಗಳಿದ್ದು, ಕಳೆದ ಬಾರಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಕಾಂಗ್ರೆಸ್ ಪಾಲಾಗಿತ್ತು. ಕಾಂಗ್ರೆಸ್ 14, ಜೆಡಿಎಸ್ 7, ಬಿಜೆಪಿ 3 ಎಸ್‌ಡಿಪಿಐ 2 ಹಾಗೂ ಪಕ್ಷೇತರರು 5 ಸ್ಥಾನ ಪಡೆದಿದ್ದರು.

**ನಂಜನಗೂಡು ನಗರಸಭೆ**

ನಂಜನಗೂಡು ನಗರಸಭೆ ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆಗೆ ಮೀಸಲಿಸರಿಲಾಗಿದೆ. ಕಳೆದ ಬಾರಿ ನಂಜನಗೂಡು ನಗರಸಭೆಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ಹಾಗೂ ಉಪಾಧ್ಯಕ್ಷ ಸ್ಥಾನ ಬಿಸಿಎ ಮಹಿಳೆಗೆ ಮೀಸಲಿತ್ತು. ನಗರಸಭೆಯಲ್ಲಿ ಒಟ್ಟು 31 ವಾರ್ಡ್ ಗಳಿದ್ದು, ಕಳೆದ ಬಾರಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಬಿಜೆಪಿ ಪಾಲಾಗಿತ್ತು. ಬಿಜೆಪಿ 15, ಕಾಂಗ್ರೆಸ್ 10, ಜೆಡಿಎಸ್ 3 ಹಾಗೂ ಪಕ್ಷೇತರರು 3 ಸ್ಥಾನ ಪಡೆದಿದ್ದರು. ಅಧ್ಯಕ್ಷರಾಗಿ ಮಹದೇವಸ್ವಾಮಿ, ಉಪಾಧ್ಯಕ್ಷೆಯಾಗಿ ನಾಗಮಣಿ– ಅಧಿಕಾರ ನಡೆಸಿದ್ದರು.

# JCB ಪಕ್ಷಗಳ ಭ್ರಷ್ಟಾಚಾರದ ವಿರುದ್ಧ ರಣಕಹಳೆ



ಬೆಳಗಾವಿ: ಮುಡಾಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ನೇರ ಹಸ್ತಕ್ಷೇಪ ಇದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಜೆಡಿಎಸ್ ಮತ್ತು ಬಿಜೆಪಿ ಮಿತ್ರ ಪಕ್ಷಗಳು ಬೆಂಗಳೂರಿನಿಂದ ಮೈಸೂರುವರೆಗೆ 9 ದಿನಗಳ ಕಾಲ ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆ ಆಗ್ರಹಿಸಿ ಪಾದಯಾತ್ರೆ ನಡೆಸಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಇದು ಎಂದೂ ಕಂಡರಿಯದ ಭ್ರಷ್ಟಾಚಾರದ ವಿರುದ್ಧದ ಹೋರಾಟವಾಗಿದೆ. ಏಕೆಂದರೆ ಈ ಹೋರಾಟದಲ್ಲಿ ಹೋರಾಟ ಮಾಡುವವರು ಹಾಗೂ ಯಾರ ವಿರುದ್ಧ ಹೋರಾಟ ನಡೆಯುತ್ತಿದೆ ಅವರ ಮೇಲೆಯೂ ಕೂಡ ಸಹಪಕ್ಷ ನಾಯಕರುಗಳಿಂದಲೇ ಭ್ರಷ್ಟಾಚಾರದ ಆರೋಪವನ್ನು ಎದುರಿಸುತ್ತಿರುವ ಜೆಸಿಬಿ ನಾಯಕರುಗಳಿದ್ದಾರೆ.

ಭ್ರಷ್ಟಾಚಾರ ವಿರುದ್ಧ ಹೋರಾಟದಲ್ಲಿ ಜೆಸಿಬಿ ನಾಯಕರುಗಳು ಆರೋಪಗಳನ್ನು ಮಾಡುತ್ತಲೇ ಬಂದಿದ್ದಾರೆ. ಈ ಆರೋಪಗಳು ಕರ್ನಾಟಕದ ಜನತೆಗೆ ಒಂದು ವಿಶೇಷ ಮನೋರಂಜನೆ ನೀಡಿದರು ಕೂಡ ಜೆಸಿಪಿ ಪಕ್ಷಗಳಿಂದ ರಾಜ್ಯದ ಘನತೆಯನ್ನು ಗಾಳಿಗೆ ತೂರಿದಂತಾಗಿದೆ.

ಬಿಜೆಪಿ ಮಿತ್ರ ಪಕ್ಷಗಳ ವಿರುದ್ಧ ಮೈಸೂರಿನಲ್ಲಿ ಜನ ಆಂದೋಲನ ಸಮಾವೇಶ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷ ಬಿಜೆಪಿ ಜೆಡಿಎಸ್ ತಾವು ಸರ್ಕಾರದಲ್ಲಿ ಇದ್ದಾಗ ಯಾವ ರೀತಿ ಭ್ರಷ್ಟಾಚಾರ ನಡೆಯಿತು ಪ್ರಕರಣಗಳನ್ನು ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಂದ ಈ ಎಲ್ಲಾ ಪ್ರಕರಣಗಳ ಬಗ್ಗೆ ವಿಡಿಯೋ ತುಣುಕಗಳನ್ನು ಪ್ರದರ್ಶನ ಮಾಡಲಾಯಿತು. ವಿರೋಧ ಪಕ್ಷಗಳ ಆಡಳಿತ ಅವಧಿಯಲ್ಲಿರುವಾಗ ಹೇಳಿರುವಂತಹ ಮಾತುಗಳು ಮತ್ತು ನಡೆದಿರುವ ಭ್ರಷ್ಟಾಚಾರಗಳು ಮತ್ತು ಅವರ ಸ್ವಪಕ್ಷದ ನಾಯಕರುಗಳ ವಾಕ್ ಸಮರದ ಕುರಿತು ವಿಡಿಯೋ ತುಣುಕಗಳನ್ನು ಪ್ರಸಾರ ಮಾಡಿದ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಹಾಗೂ ವಿರೋಧ ಪಕ್ಷದ ನಾಯಕರಾದ ಆರ್ ಅಶೋಕ್ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಾದ ಬಿಎಸ್ ವೈ ವಿಜಯೇಂದ್ರ ಅವರನ್ನೇ ಗುರಿಯಾಗಿಸಿ ವಿಡಿಯೋ ತುಣುಕಗಳನ್ನು ಪ್ರದರ್ಶನ ಮಾಡಿದ್ದಕ್ಕೆ ಎಚ್ ಡಿ ಕುಮಾರಸ್ವಾಮಿ ಈ ವಿಷಯವನ್ನು ಸವಾಲಾಗಿ ಸ್ವೀಕರಿಸಿ ಮೈಸೂರು ಚಲೋ ಸಮಾರೋಪ ಸಮಾರಂಭದಲ್ಲಿ ನಾನು ಏನು ಕಮ್ಮಿಯಲ್ಲ ಎಂದು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆಶಿ ಆಡಿದ ಮಾತುಗಳನ್ನು ವಿಡಿಯೋ ತುಣುಕವಾಗಿ ಪ್ರದರ್ಶನ ಮಾಡಿದರು.

ಜನ ಆಂದೋಲನ ಹಾಗೂ ಮೈಸೂರು ಚಲೋ ಪಾದಯಾತ್ರೆ ಜೆಸಿಬಿ ಪಕ್ಷಗಳ ಈ ಹೋರಾಟದಿಂದ ಕರ್ನಾಟಕದ ಜನತೆಗೆ ಏನು ಲಾಭವಾಗಿದೆ? ರಾಜ್ಯದ ಜನಸಾಮಾನ್ಯರ ಸಮಸ್ಯೆಗಳಿಗೆ ಏನು ಸಮಸ್ಯೆ ಪರಿಹಾರಕ್ಕೆ ಮಾರ್ಗ ಸಿಗಲಿದೆ ಎಂಬುದು ಪ್ರಶ್ನೆಯಾಗಿ ಉಳಿದಿದೆ.

ಇಲ್ಲಿ ಪಕ್ಷಗಳು ತಮ್ಮ ಶಕ್ತಿ ಪ್ರದರ್ಶನದ ಹೊರತು ಬೇರೆ ಏನು ಲಾಭ ಇಲ್ಲ ಸರಕಾರದಲ್ಲಿರುವ ಕಾಂಗ್ರೆಸ್ ಜನರ ಜೀವನರಗೆ ನೀಡಿರುವಂತಹ ಭರವಸೆಗಳನ್ನು ಜನರಿಗೆ ತಲುಪಲು ಇನ್ನಷ್ಟು ಪರಿಶ್ರಮದ ಅವಶ್ಯಕತೆ ಇದೆ. ರಾಜಕೀಯ ಮಾಡುವ ಸಮಯ ಇದು ಅಲ್ಲ ಇದು ಆಡಳಿತರೂಢ ಪಕ್ಷ ಗಮನದಲ್ಲಿ ಇಡುವಂತ ವಿಷಯ ಬಿಜೆಪಿ ತಮ್ಮ ಆಂತರಿಕ ಸಮಸ್ಯೆಗಳಿಂದ ಬಳಲುತ್ತಾ ಇದೆ. ಈಗಾಗಲೇ ವಿಜಯಪುರ ಶಾಸಕ ಬಸವರಾಜ್ ಯತ್ನಾಳ್ ಹಾಗೂ ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ ಬಿಜೆಪಿಯಲ್ಲಿ ತಮ್ಮ ಸ್ವಹಪಕ್ಷದಲ್ಲಿ ಬಂಡಾಯ ಎದ್ದಂತೆ ಇದೆ ಸರ್ಕಾರದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಸಮರ ಸಾರಿದರೆ ನಾಯಕರುಗಳು ತಮ್ಮ ನಾಯಕರುಗಳಿಗೆ ಹರಿಹಾಯುತ್ತಿದ್ದಾರೆ.

ಉತ್ತರ ಕರ್ನಾಟಕದ ನಾಯಕರಗಳು ಮತ್ತು ದಕ್ಷಿಣ ಕರ್ನಾಟಕದ ನಾಯಕರಗಳು ಎಂದು ಬಿಜೆಪಿಯಲ್ಲಿ ಎರಡು ಬಣಗಳು ಸೃಷ್ಟಿಯಾಗಿದೆ ಇದರಿಂದ ಅಖಂಡ ಕರ್ನಾಟಕಕ್ಕೂ ದಕ್ಕೆಯಾದಂತಿದೆ. ಈ ಎಲ್ಲಾ ಕಾರಣಗಳಿಂದಾಗಿ ಬಿಜೆಪಿಯಲ್ಲಿ ನಾಯಕರಗಳ ಮಧ್ಯೆ ಸರಿಯಿಲ್ಲ ಎಂಬುದು ಸ್ಪಷ್ಟ ಸಂದೇಶ ಕರ್ನಾಟಕದ ಜನತೆಗೆ ನೀಡಿದ್ದಾರೆ. ಬಿಜೆಪಿ ವಿರುದ್ಧವೇ ಸ್ವಪಕ್ಷದ ನಾಯಕರಗಳು ಭ್ರಷ್ಟಾಚಾರದ ಆರೋಪ ಮಾಡುತ್ತಿರುವುದು ಒಂದು ಗಂಭೀರ ವಿಷಯ ಸರಿ. ಇದನ್ನು ಪಕ್ಷದ ನಾಯಕರಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಪಕ್ಷದ ಹಿತೈಷಿಗಳು ಸಲಹೆ ನೀಡುತ್ತಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಟ ರಾಜ್ಯದಲ್ಲಿ ಹಾಸ್ಯಸ್ಪದವಾಗಿ ನಿಲ್ಲಬಾರದು ಹೋರಾಟಗಳ ಗಂಭೀರತೆ ಇರಲಿ ಜನರ ಮತ್ತು ಅವರ ನಂಬಿಕೆಯ ಮೇಲೆ ಗಾಂಭೀರ್ಯತೆ ಇರಲಿ.

# ಗ್ಯಾರಂಟಿ ನಿಲ್ಲಲ್ಲ




ಬೆಂಗಳೂರು:– ರಾಜ್ಯದಲ್ಲಿ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಮುಂದುವರೆಯಲಿವೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಹೇಳುವ ಮೂಲಕ ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ, ಚರ್ಚೆ, ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಚುನಾವಣಾ ಸಂದರ್ಭದಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನಾಡಿನ ಸಮಸ್ತ ಜನರ ಬದುಕಿಗೆ ಆರ್ಥಿಕ ಭದ್ರತೆ ತರುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಈ ಗ್ಯಾರಂಟಿ ಯೋಜನೆಗಳು ಮುಂದುವರೆಯಲಿವೆ ಎಂದ ಅವರು. ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ., ಶಕ್ತಿ ಮತ್ತು ಯುವನಿಧಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಭವಿಷ್ಯ ನುಡಿಯುತ್ತಿರುವವರಿಗೆ ರಾಜ್ಯದಲ್ಲಿ ಆರ್ಥಿಕ ಪ್ರಗತಿ ಸಾಧಿಸಿ ತೋರಿಸುವ ಮೂಲಕ ನಾವು ಉತ್ತರ ನೀಡಲಿದ್ದೇವೆ ಎಂದರು.

ರಾಜ್ಯ ಸರ್ಕಾರದ ಜನ ಕಲ್ಯಾಣ ಯೋಜನೆಗಳು ಐದು ಗ್ಯಾರಂಟಿಗಳಿಷ್ಟೇ ಸೀಮಿತವಾಗಿಲ್ಲ. ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತೆ ನೀಡುವ ವಿವಿಧ ಯೋಜನೆಗಳಡಿ 13,027 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಅವರು ಹೇಳಿದರು.

# 98 ನಿಮಿಷ ಸುದೀರ್ಘ ಭಾಷಣ ಮಾಡಿದ ಮೊದಲ ಪ್ರಧಾನಿ ಮೋದಿ



ನವದೆಹಲಿ: 78ನೇ ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗುರುವಾರ ದೆಹಲಿಯ ಐತಿಹಾಸಿಕ ಕೆಂಪು ಕೋಟೆಯಿಂದ ದೇಶವನ್ನು ಉದ್ದೇಶಿಸಿ ಭಾಷಣ ಮಾಡಿದರು. ಇದು ಸ್ವಾತಂತ್ರ್ಯೋತ್ಸವದ ಇತಿಹಾಸದಲ್ಲೇ ಅತಿ ದೀರ್ಘ ಭಾಷಣ ಎಂದು ದಾಖಲಾಯಿತು.

ಗುರುವಾರ ಅವರು 98 ನಿಮಿಷಗಳ ಕಾಲ ಸತತವಾಗಿ ಮಾತನಾಡಿದರು. ಇದು ಯಾವುದೇ ಪ್ರಧಾನಿಗಳು ಮಾಡಿದ ಸ್ವಾತಂತ್ರ್ಯ ಭಾಷಣಗಳಿಗಿಂತ ಸುದೀರ್ಘವಾಗಿದೆ. ಪ್ರಧಾನಿ ಮೋದಿ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದ ಬಳಿಕದ ಮೊದಲ ಸ್ವಾತಂತ್ರ್ಯೋತ್ಸವ ಭಾಷಣ ಇದಾಗಿದೆ. ಸ್ವಾತಂತ್ರೋತ್ಸವದ ವೇಳೆ ಮೋದಿ ಮಾಡಿದ ಸರಾಸರಿ ಭಾಷಣದ ಅವಧಿ 82 ನಿಮಿಷ. ಇದೂ ಕೂಡ ಯಾವುದೇ ಪ್ರಧಾನಿಗಿಂತ ದೊಡ್ಡ ಭಾಷಣವಾಗಿದೆ. ಇದಕ್ಕೂ ಮೊದಲು 2016ರ ಸ್ವಾತಂತ್ರ್ಯೋತ್ಸವದಲ್ಲಿ 96 ನಿಮಿಷಗಳ ಕಾಲ ಭಾಷಣ ಮಾಡಿದ್ದು ಈವರೆಗಿನ ದಾಖಲೆಯಾಗಿತ್ತು. ಈ ದಾಖಲೆಯನ್ನು ಅವರೇ ಮುರಿದಿದ್ದಾರೆ. ಮೋದಿ ಅವರು ಮಾಡಿದ ಅತಿ ಕಡಿಮೆ ಅವಧಿಯ ಭಾಷಣವೆಂದರೆ, 2017ರಲ್ಲಿ 56 ನಿಮಿಷ ಮಾತನಾಡಿರುವುದು.

# ಬಾರ್ ಆಂಡ್, ರೆಸ್ಟೋರೆಂಟ್ ಪರವಾನಿಗೆ ತಾತ್ಕಾಲಿಕವಾಗಿ ತಡೆ: ತಾಪಂ ಕಾರ್ಯನಿರ್ವಾಹಕ ಅಧಿಕಾರಿ



ಪಾಲಬಾವಿ: ಗ್ರಾಮದಲ್ಲಿ ಸಾಯಿ ಬಾರ್ ಆಂಡ್, ಲಾಡ್ಜ್ ರೆಸ್ಟೋರೆಂಟ್ ಗೆ ನೀಡಿರುವ ಉದ್ಯೋಗ ಪರವಾನಿಗೆ (ಲೈಸೆನ್ಸ್) ನ್ನು ನೀಡಿದ ವಿಷಯವಾಗಿ ಗ್ರಾಮದ ಹಿರಿಯರಾದ ಭರಮಪ್ಪ ನಿಂಗನೂರ, ಹುಲೆಪ್ಪ ತೇಗೂರ ಅವರ ನೇತೃತ್ವದಲ್ಲಿ ಕಳೆದ ಬುಧವಾರ 7ರಿಂದ ಸೋಮವಾರ 12ರ ವರೆಗೆ ಪರವಾನಿಗೆ ನೀಡಿದ (ಲೈಸೆನ್ಸ್) ಅನ್ನು ರದ್ದು ಮಾಡಬೇಕೆಂದು ಧರಣಿ ಸತ್ಯಾಗ್ರಹ ನಡೆಸಿದ್ದಾರು. ಸಾರ್ವಜನಿಕರಿಗೆ ತಿಳಿಸಿದಂತೆ ಇವತ್ತು ಅಗಸ್ಟ್ 12ರಂದು ಗ್ರಾಪಂ ಅಧ್ಯಕ್ಷೆ ಶೋಭಾ ಕುರಬೆಟ್ಟಿ ಅವರ ಅಧ್ಯಕ್ಷತೆಯಲ್ಲಿ ತುರ್ತಾಗಿ ಸಾಮಾನ್ಯ ಸಭೆಯನ್ನು ಕರೆದು ಬೆಳಗ್ಗೆ 11ಗಂಟೆಗೆ ಆರಂಭವಾದ ಸಭೆಯು ಮಧ್ಯಾಹ್ನ 3:35ರ ಜರುಗಿತು. ಸಭೆಯಲ್ಲಿ ಎಲ್ಲ ಸದಸ್ಯರು ತೀರ್ಮಾನಿಸಿದಂತೆ ಬಾರ್ ಆಂಡ್, ಲಾಡ್ಜ್ ರೆಸ್ಟೋರೆಂಟ್ಸ್ ಗೆ ಪರವಾನಿಗೆ (ಲೈಸೆನ್ಸ್) ನೀಡಿದ್ದನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಧರಣಿ ಸತ್ಯಾಗ್ರಹವನ್ನು ಸಾರ್ವಜನಿಕರು ಸಹಕರಿಸಿ ಧರಣಿಯನ್ನು ಕೈಬಿಡಬೇಕೆಂದು ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಅರುಣ ಮಾಚಕನೂರ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ಪಾಲಬಾವಿ ಗ್ರಾಮದಲ್ಲಿ ಪಂಚಾಯತ್ ಸಭಾಭವನದಲ್ಲಿ ಸೋಮವಾರ ದಿ.12ರಂದು ಸಾಮಾನ್ಯ ಸಭೆ ಕರೆದು ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳನ್ನು ಧರಣಿ ಸತ್ಯಾಗ್ರಹ ನಡೆಯುತ್ತಿರುವ ಸ್ಥಳಕ್ಕೆ ಬಂದು ಗ್ರಾಮಸ್ಥರನ್ನ ಮಹಿಳೆಯರನ್ನು ಕುರಿತು ಪರವಾನಿಗೆ ನೀಡಿದ್ದನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲೂಕ ಪಂಚಾಯತ ಸಹಾಯಕ ನಿರ್ದೇಶಕ ವಾಸುದೇವ ಎಸ್.ವಿ, ಪಿಡಿಓ ಶ್ರೀಕಾಂತ ಪಾಟೀಲ, ಕಾರ್ಯದರ್ಶಿ ರಮೇಶ ಪಾಟೀಲ,

ಸಿಪಿಐ ರವಿಚಂದ್ರನ್ ಡಿ.ಬಿ, ಹಾರೂಗೇರಿ ಪಿಎಸ್ಐ ಮಾಳಪ್ಪ ಪೂಜಾರಿ, ಕುಡಚಿ ಪಿಎಸ್ಐ ಪ್ರೀತಮ್ ನಾಯಿಕ, ಎಎಸ್ಐ ಸೂರ್ಯಕಾಂತ ಶಿಂಗೆ, ಅಶೋಕ ಸ್ಯಾಂಡಗಿ ಇದ್ದರು. ಹಾರೂಗೇರಿ ಠಾಣಾ ಪೊಲೀಸ್ ಹಾಗೂ ಡಿಎಆರ್ ಸಿಬ್ಬಂದಿಯು ಬಿಗಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಧರಣಿ ಸತ್ಯಾಗ್ರಹ ನಡೆಸಿದ ಸ್ಥಳದಲ್ಲಿ ಮಾತನಾಡಿದ ಗ್ರಾಮದ ಸದಸ್ಯ ಪ್ರಭು ಕರೋಶಿ ಪಾಲಬಾವಿ ಗ್ರಾಮ ಪಂಚಾಯತಿಯಲ್ಲಿ ಕೆಲವು ವರ್ಷಗಳ ಹಿಂದೆ ಸಾರಾಯಿ ಅಂಗಡಿ ತೆರೆಯಲು ಸ್ಥಳೀಯರು ಅರ್ಜಿ ಸಲ್ಲಿಸಿದರು. ಅವರಿಗೆ ಉದ್ಯೋಗ (ಲೈಸೆನ್ಸ್) ಪರವಾನಿಗೆ ನೀಡಿದೇವು ಆದರೆ, ಅವರು ಎಂ–ಎಸ್‌ಐಎಲ್ ಅಂಗಡಿ ತೆರಲಿಲ್ಲ ಅದು ವೈಯಕ್ತಿಕ ವಿಚಾರವಾಗಿದ್ದು, ಕಳೆದ ಫೇಬ್ರುವಾರಿ 12ರಂದು ರವಿ ಬಾಬು ಠಕ್ಕಣ್ಣವರ ಸಾಯಿ ಬಾರ್ ಆಂಡ್ ಲಾಡ್ಜ್, ರೆಸ್ಟೋರೆಂಟ್ ತೆರೆಯಲು ಅರ್ಜಿ ಸಲ್ಲಿಸಿದರು. ಫೆಬ್ರವರಿ 21ರಂದು ಗ್ರಾಪಂ ಅಧ್ಯಕ್ಷೆ ಶೋಭಾ ಕುರಬೆಟ್ಟಿ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ಕರೆದು, ಪರವಾನಿಗೆ (ಲೈಸೆನ್ಸ್) ನೀಡಿದ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲು ಸಭೆಯನ್ನು ಮುಂದೆ ಹಾಕಲಾಯಿತು. ನಂತರ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಾದ ಕಾರಣ ಜೂನ್ 20ರಂದು ಸಾಮಾನ್ಯ ಸಭೆಯ ಕರೆದು ಪಂಚಾಯತಿಗೆ ಬಂದಿರುವ ಅರ್ಜುಗಳನ್ನು ಪರಿಶೀಲಿಸಿದಾಗ ರವಿ ಬಾಬು ಠಕ್ಕಣ್ಣವರ ಸಲ್ಲಿಸಿದ ಅರ್ಜಿಯನ್ನು ಅಂತಿಮಗೊಳಿಸಿ ಸಾಯಿ ಬಾರ್ ಆಂಡ್, ಲಾಡ್ಜ್ ರೆಸ್ಟೋರೆಂಟ್ ಪರವಾನಿಗೆ (ಲೈಸೆನ್ಸ್ ) ನೀಡಿದೇವು. ಸಾಯಿ ಬಾರ್ ಆಂಡ್ ಲಾಡ್ಜ್ ರೆಸ್ಟೋಂಟಿಗೆ ಪರವಾನಿಗೆ ನೀಡಿದ್ದರಿಂದ ಕೆಲವು ಸ್ಥಳೀಯರು ಪಂಚಾಯಿತಿಯ ಸಭಾಭವನದ ಎದುರಿಗೆ ಧರಣಿ ಸತ್ಯಾಗ್ರಹ ನಡೆಸಿದರು. ಆದರೇ ಕಳೆದ ಏಳು ತಿಂಗಳಿಂದ ನಮ್ಮ ಗ್ರಾಮ ಪಂಚಾಯಿತಿ ಕಚೇರಿಗೆ ಸರಾಯಿ ಅಂಗಡಿ ಹಾಗೂ ಬಾರ್ ಆಂಡ್, ಲಾಡ್ಜ್ ರೆಸ್ಟೋರೆಂಟ್ ಬೇಕು ಎಂದು ಅರ್ಜಿ ಸಲ್ಲಿಸಿದವರು ರವಿ ಬಾಬು ಠಕ್ಕನ್ನವರ, ಪರಪ್ಪ ಶಿವಪ್ಪ ಕರೋಶಿ, ಸಿರಿಯಾಳ ಲಕ್ಷ್ಮಣ ಮಾದರ, ಭೀಮಪ್ಪ ಗುರುಪಾದ ತೇಗೂರ, ಸಂಗಮೇಶ ಶಿವಪ್ಪ ನಿಂಗನೂರ, ಮಹಾಂತೇಶ ಸಿದ್ದಪ್ಪ ಮಾನಶೆಟ್ಟಿ, ಶಿವಪ್ಪ ಬಸಪ್ಪ ಮೂಡಲಗಿ, ಅಲ್ಲಮಪ್ರಭು ಬಸಪ್ರಭು ತೇಗೂರ, ಬಸಪ್ರಭು ಹನುಮಂತ ತೇಗೂರ, ಭರಮಪ್ಪ ಬಸವಣ್ಣಿ ನಿಂಗನೂರ, ಸೋಮಪ್ಪ ಬಸವಣ್ಣಿ ನಿಂಗನೂರ, ಮುತ್ತಪ್ಪ ಚನ್ನಬಸು ಶಿವಪುರ ಹಾಗೂ ಕಿರಣ ಶಿವಪ್ಪ ನಿಂಗನೂರ ಅರ್ಜಿಸಲ್ಲಿಕಿಸಿದ್ದರು ಧರಣಿ ಸತ್ಯಾಗ್ರಹ ನಡೆದ ಸ್ಥಳದಲ್ಲಿ ಸಾರ್ವಜನಿಕರಿದರು ತಿಳಿಸಿದರು.

ಧರಣಿ ಸತ್ಯಾಗ್ರಹ ನಡೆಯುತ್ತಿರುವ ಸ್ಥಳದಲ್ಲಿ ಭಂಡಾರದ ಒಡೆಯ ಸದಲಗಾ ಪುಣ್ಯಕ್ಷೇತ್ರದ ಶ್ರೀ ಧರಿಖಾನ ಅಜ್ಜನವರು, ರೈತ ಸಂಘದ ಜಿಲ್ಲಾ ಮುಖಂಡ ಬಾಬುರಾವ ಪಾಟೀಲ, ಡಿಎಸ್‌ಎಸ್ (ಭೀಮವಾದ) ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ ಶಿಂಪಿ, ಧರಣಿ ಸತ್ಯಾಗ್ರಹದ ಮುಖ್ಯಸ್ಥರು ಹುಲೆಪ್ಪ ತೇಗೂರ, ಬರಮಪ್ಪ ನಿಂಗನೂರ, ಬರಮಪ್ಪ ಮಾನಶೆಟ್ಟಿ, ಬರಮಪ್ಪ ಜೋಗಿ, ತಾಲೂಕು ರೈತ ಸಂಘ ಅಧ್ಯಕ್ಷ ರಮೇಶ ಕಲ್ಲಾರ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಸಂಜು ಕಾಂಬಳೆ, ಬಾವುರಾಜ ತೆಗೂರ, ಪರಶುರಾಮ ತೋನಪೆ, ಪ್ರಭಾಕರ ಕುರಬೆಟ್ಟಿ, ಸಂಗಮೇಶ ನಿಂಗನೂರ, ಅಸ್ಲಾಂ ಬಿರಾದಾರ, ವಿನಯ ಬಿದರಮಳ್ಳಿ, ಗುರು ಮಾದರ, ಶ್ರೀಶೈಲ ನಿಂಗನೂರ, ಸುಕುಮಾರ ಕಾಂಬಳೆ, ಗಂಗವ್ವ ಪಾಟೀಲ, ಚಂದ್ರವ್ವ ಉಡಗಟ್ಟಿ, ಮನವ್ವ ತುಪ್ಪದ, ಪಿಕೆಪಿಎಸ್ ಬ್ಯಾಂಕ್ ಅಧ್ಯಕ್ಷ ಗುರು ಮರಡಿ, ಶಿವಪ್ಪ ಕಾಡಶೆಟ್ಟಿ, ಸಂಜು ತೇಗೂರ, ಹಜರತ್ ಮುಂಜಾವರ, ಪ್ರಕಾಶ ಪಾಟೀಲ, ಸಾಗರ್ ಕುರಬೆಟ್ಟಿ, ಗಿರಪ್ಪ ಬಳಿಗಾರ, ರಾಜು ಹಿರೇಮಠ, ಶ್ರೀಶೈಲ ಗೋಡಿ, ಕಲ್ಲಪ್ಪ ಮರಡಿ, ಕಾಲಿಸಾಬ್ ಮುಲ್ಲಾ ಇತರರು ಇದ್ದರು.

ಅಗಸ್ಟ್ 12ರಂದು ಗ್ರಾಮ ಪಂಚಾಯತ್ ಸಭಾಭವನದಲ್ಲಿ ಕರೆದ ತುರ್ತು ಸಾಮಾನ್ಯ ಸಭೆಯು ಗ್ರಾಪಂ ಅಧ್ಯಕ್ಷೆ ಶೋಭಾ ಕುರಬೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಶೈರಾಬಿ ಬಿರಾದರ, ಸದಸ್ಯರಾದ ಬಸಪ್ಪ ತೇಗೂರ, ಸಿರಿಯಾಳ ಮಾದರ, ಪರಪ್ಪ ಗೋಡಿ, ಆಸ್ಕರ್ ಮುಜಾವರ, ಗುರುನಾಥ ಜುಂಜರವಾಡ, ಸಂಗಪ್ಪ ಕಾಡಶೆಟ್ಟಿ, ರಾಮಪ್ಪ ತೇಗೂರ, ಪ್ರಭು ಕರೋಶಿ, ಮಹಿಳಾ ಸದಸ್ಯರಾದ ಚಂದ್ರವ್ವ ಬಳಿಗಾರ, ಪದ್ಮಶ್ರೀ ಪಾಟೀಲ, ಅಮೃತಾ ನಾಯ್ಕರ, ಬಿಸ್ಮಿಲ್ಲಾ ಕಾಗವಾಡ, ರಾಜೇಶ್ರೀ ಬಳಿಗಾರ ಹಾಗೂ ಗೀತಾ ಗಡಿಂಗ್ಲಜ ಇದ್ದರು. ತುರ್ತು ಸಭೆಯಲ್ಲಿ ರವಿ ಠಕ್ಕಣ್ಣವರ ಅವರ ಸಾಯಿ ಬಾರ್ ಆಂಡ್ ಲಾಜ್ಡ್ ಮತ್ತು ರೆಸ್ಟೋರೆಂಟ್ ಉದ್ಯೋಗ (ಲೈಸೆನ್ಸ್) ನೀಡಿದ ಪರವಾನಿಗೆಯನ್ನು ತಾತ್ಕಾಲಿಕವಾಗಿ ರದ್ದುಪಡಿಸಲು 14 ಜನ ಗ್ರಾಪಂ ಸದಸ್ಯರು ಒಪ್ಪಿದರು. ಆದರೇ

ಗ್ರಾಪಂ ಉಪಾಧ್ಯಕ್ಷೆ ಶೈರಾಬಿ ಬಿರಾದಾರ, ಸದಸ್ಯ ಸಿರಿಯಾಳ ಮಾದರ ಅವರು ಅಧಿಕಾರಿಗಳಿಗೆ ಸೂಚನೆ ಮಾಡುತ್ತ ಸಾಯಿ ಬಾರ್ ಆಂಡ್ ಲಾಡ್ಜ್ ರೆಸ್ಟೋರೆಂಟ್ ಪರವಾನಿಗೆ (ಲೈಸೆನ್ಸ್) ನೀಡಿದ್ದನ್ನು ಸಂಪೂರ್ಣವಾಗಿ ರದ್ದುಪಡಿಸಬೇಂದು ತಿಳಿದರು.

## ಸಂಪಾದಕೀಯ

# ಸುಪ್ರೀಂ ತರಾಟೆ

ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ಬಂಧಿಸಿ 17 ತಿಂಗಳು ಸೆರೆಮನೆಯಲ್ಲಿ ಇರಿಸಿದ್ದವು. ಈ ಎರಡೂ ತನಿಖಾ ಸಂಸ್ಥೆಗಳನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸದೆ, ಜಾಮೀನು ಪಡೆಯುವ ಅವರ ಹಕ್ಕನ್ನು ಕಸಿದುಕೊಳ್ಳಲಾಗಿದೆ ಎಂದೂ ನ್ಯಾಯಾಲಯ ಹೇಳಿದೆ. ಸಿಸೋಡಿಯಾ ಅವರು ಜಾಮೀನಿಗಾಗಿ ಕಂಬ ಸುತ್ತುವಂತೆ ಮಾಡಬಾರದಿತ್ತು ಜಾಮೀನಿಗಾಗಿ ಅವರು ವಿಚಾರಣಾ ನ್ಯಾಯಾಲಯದಿಂದ ಸುಪ್ರೀಂ ಕೋರ್ಟ್‌ವರೆಗೆ ಅಲೆಯುವಂತೆ ಮಾಡಿ, ಜಾಮೀನು ಪ್ರಕ್ರಿಯೆಯನ್ನೇ ಹಾವು–ಏಣಿ ಆಟ ಮಾಡಲಾಯಿತು; ಜಾಮೀನು ನೀಡದೆ, ಅದೇ ಅವರಿಗೆ ಶಿಕ್ಷೆ ಎಂಬಂತೆ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಹೇಳಿದೆ.ವಿಚಾರಣೆಯು ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ತನಿಖಾಧಿಕಾರಿಗಳು ಕಳೆದ ವರ್ಷವೇ ನ್ಯಾಯಾಲಯಕ್ಕೆ ಹೇಳಿದ್ದರು. ಆದರೆ, ಅದು ಈಗಲೂ ಆರಂಭವೇ ಆಗಿಲ್ಲ. ನ್ಯಾಯಾಲಯವೇ ಹೇಳಿರುವಂತೆ, ಈ ವರ್ಷವೂ ವಿಚಾರಣೆ ಆರಂಭಗೊಳ್ಳುವ ಕ್ಷೀಣ ಸಾಧ್ಯತೆಯೂ ಇಲ್ಲ; ಏಕೆಂದರೆ ಪ್ರಕರಣದಲ್ಲಿ 493 ಸಾಕ್ಷಿಗಳನ್ನು ಪಟ್ಟಿ ಮಾಡಲಾಗಿದೆ, ಸಾವಿರಕ್ಕೂ ಹೆಚ್ಚು ದಾಖಲೆಗಳಿವೆ, ಅವು ಲಕ್ಷಕ್ಕೂ ಹೆಚ್ಚು ಪುಟಗಳಿವೆ. ಸಿಸೋಡಿಯಾ ಅವರ ಕಾರಣದಿಂದಲೇ ತನಿಖೆ ವಿಳಂಬವಾಗಿದೆ ಎಂಬ ತನಿಖಾ ಸಂಸ್ಥೆಗಳ ಆರೋಪವನ್ನೂ ನ್ಯಾಯಪೀಠವು ತಳ್ಳಿಹಾಕಿದೆ. ಈಗ ನ್ಯಾಯಾಲಯವು ಜಾಮೀನು ನೀಡಲು ಕೊಟ್ಟಿರುವ ಕಾರಣವು ಎಲ್ಗಾರ್ ಪರಿಷತ್ ಪ್ರಕರಣ, ದೆಹಲಿ ಗಲಭೆ ಪ್ರಕರಣಗಳಂತಹ ಇನ್ನೂ ಕೆಲವು ಪ್ರಕರಣಗಳಿಗೆ ಸಂಬಂಧಿಸಿ ಕೂಡ ಪ್ರಸ್ತುತ ಎನಿಸುತ್ತದೆ. ನ್ಯಾಯಾಲಯ ಈಗ ಕೇಳಿರುವ ಪ್ರಶ್ನೆಗಳು ಜಾಮೀನು ಅರ್ಜಿಗಳ ಕುರಿತು ತೀರ್ಮಾನ ಕೈಗೊಳ್ಳುವಾಗ ಹಾಗೂ ತನಿಖಾ ಸಂಸ್ಥೆಗಳ ವರ್ತನೆಯನ್ನು ಅವಲೋಕಿಸುವಾಗ ಕೂಡ ಮಹತ್ವದ್ದಾಗುತ್ತವೆ. ಅಪರಾಧವು ಗಂಭೀರವಾಗಿದೆ ಎಂಬ ಕಾರಣದಿಂದ ವಿಚಾರಣೆ ವಿಳಂಬಗೊಳ್ಳುವಂತೆ ಮಾಡಲಾಗದು ಎಂಬುದನ್ನು ನ್ಯಾಯಾಲಯವು ದೃಢಪಡಿಸಿದೆ. ಜಾಮೀನು ನೀಡಿಕೆಯು ಅತ್ಯಂತ ಬಿಗಿಯಾಗಿರುವ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಮತ್ತು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ ಅಡಿಯಲ್ಲಿನ ಪ್ರಕರಣಗಳಲ್ಲಿಯೂ ಸ್ವಾತಂತ್ರ್ಯದ ಹಕ್ಕನ್ನು ನಿರಾಕರಿಸಲು ಆಗದು ಎಂಬುದನ್ನೂ ಕೋರ್ಟ್ ಸ್ಪಷ್ಟಪಡಿಸಿದಂತಿದೆ. ಸಿಸೋಡಿಯಾ ಅವರು ಪರಾರಿಯಾಗಿ ತಲೆಮರೆಸಿಕೊಳ್ಳುವ ಸಾಧ್ಯತೆ ಇಲ್ಲ. ಹಾಗೆಯೇ ಅವರು ಸಾಕ್ಷ್ಯ ನಾಶಪಡಿಸಲೂ ಸಾಧ್ಯವಿಲ್ಲ. ಅವರು ತಮ್ಮ ಕಚೇರಿಗೆ ಮತ್ತು ದೆಹಲಿ ವಿಧಾನಸಭಾ ಕಾರ್ಯಾಲಯಕ್ಕೆ ಪ್ರವೇಶಿಸಬಾರದು ಎಂಬ ತನಿಖಾ ಸಂಸ್ಥೆಗಳ ಕೋರಿಕೆಯನ್ನೂ ನ್ಯಾಯಾಲಯವು ತಿರಸ್ಕರಿಸಿದೆ. ಜಾಮೀನು ನೀಡುವ ಹೊಣೆಯಿಂದ ಕೆಳ ನ್ಯಾಯಾಲಯಗಳು ನುಣುಚಿಕೊಳ್ಳುತ್ತಿವೆ; ಸುಲಭವಾಗಿ ಜಾಮೀನು ನೀಡಬಹುದಾದ ಪ್ರಕರಣಗಳು ಕೂಡ ಸುಪ್ರೀಂ ಕೋರ್ಟ್‌ವರೆಗೆ ಬರುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈಗಿನ ತೀರ್ಪು ಕೆಳ ನ್ಯಾಯಾಲಯಗಳಿಗೆ ಮಾರ್ಗದರ್ಶಕವಾಗಿದೆ. 'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜಾಮೀನು ನಿರಾಕರಿಸಬಹುದು' ಮತ್ತು 'ತನಿಖಾ ಪ್ರಕ್ರಿಯೆಯೇ ದಂಡನೆಯಾಗಿ ಪರಿವರ್ತನೆ ಆಗಬಾರದು' ಎಂಬ ಪರಿಕಲ್ಪನೆಗಳು ಹೊಸವೇನೂ ಅಲ್ಲ. ಆದರೆ, ಈ ಪರಿಕಲ್ಪನೆಗಳು ಪದೇಪದೇ ಉಲ್ಲಂಘನೆ ಆಗುತ್ತಿರುವ ಈಗಿನ ಕಾಲದಲ್ಲಿ ಇದನ್ನು ಪುನರುಚ್ಚರಿಸಬೇಕಿದೆ.

# ಚಿತ್ರದುರ್ಗ ನಗರಸಭೆ, ಕುಶಾಲನಗರ, ಬನ್ನೂರು ಪಟ್ಟಣ ಪಂಚಾಯಿತಿ ಚುನಾವಣೆಗೆ ದಿನಾಂಕ ನಿಗದಿ

ಬೆಂಗಳೂರು: ಚಿತ್ರದುರ್ಗ ನಗರಸಭೆ, ಕುಶಾಲನಗರ ಮತ್ತು ಬನ್ನೂರು ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ದಿನಾಂಕ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ. ಚಿತ್ರದುರ್ಗ ನಗರಸಭೆ, ಬನ್ನೂರು ಮತ್ತು ಕುಶಾಲನಗರ ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲು ನಿಗದಿಪಡಿಸಿ ಚುನಾವಣೆ ನಡೆಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸಯ್ಯದ್ ನಸ್ರುಲ್ಲಾ ಸೇರಿದಂತೆ ಇತರೆ ಚುನಾಯಿತ ಪ್ರತಿನಿಧಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರ ಪೀಠಕ್ಕೆ ಸರ್ಕಾರಿ ವಕೀಲರು ಮಾಹಿತಿ ನೀಡಿದರು.



ಸರ್ಕಾರದ ಪರ ವಕೀಲರು ಹಾಜರಾಗಿ, ಚಿತ್ರದುರ್ಗ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಆ.26ರಂದು ಚುನಾವಣೆ ನಡೆಸಲಾಗುತ್ತದೆ. ಹಾಗೆಯೇ, ಕೊಡಗು ಜಿಲ್ಲೆಯ ಕುಶಾಲನಗರ ಮತ್ತು ಮೈಸೂರು ಜಿಲ್ಲೆಯ ಬನ್ನೂರು ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಗೆ ಕ್ರಮವಾಗಿ ಆ.19 ಮತ್ತು ಸೆ.6ರಂದು ಚುನಾವಣೆ ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿ ಪ್ರಮಾಣಪತ್ರ ಸಲ್ಲಿಸಿದರು. ಅದನ್ನು ದಾಖಲಿಸಿಕೊಂಡ ನ್ಯಾಯಪೀಠ, ಅರ್ಜಿದಾರರ ಮನವಿ ಈಡೇರಿರುವುದರಿಂದ ಹೆಚ್ಚಿನ ವಿಚಾರಣೆ ಅಗತ್ಯ ಇಲ್ಲ ಎಂದು ಅಭಿಪ್ರಾಯಪಟ್ಟು ಅರ್ಜಿ ಇತ್ಯರ್ಥಪಡಿಸಿತು.ಅರ್ಜಿಯು 2024ರ ಆ.7ರಂದು ವಿಚಾರಣೆಗೆ ಬಂದಿದ್ದಾಗ ಸರ್ಕಾರದ ಪರ ಎಎಜಿ ಪ್ರತಿಮಾ ಹೊನ್ನಾಪುರ ಹಾಜರಾಗಿ, ಚಿತ್ರದುರ್ಗ, ಕುಶಾಲನಗರ ಮತ್ತು ಬನ್ನೂರು ಪಟ್ಟಣ ಪಂಚಾಯಿತಿ ಸೇರಿದಂತೆ ರಾಜ್ಯದ 117 ಪಟ್ಟಣ ಪಂಚಾಯಿತಿ, 123 ಪುರಸಭೆ ಮತ್ತು 61 ನಗರಸಭೆಗಳ ಎರಡನೇ ಅವಧಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲು ನಿಗದಿಪಡಿಸಿ ಸರ್ಕಾರ ಹೊರಡಿಸಿದ್ದ ಗೆಜೆಟ್ ಅಧಿಸೂಚನೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದ್ದರು.

ಅರ್ಜಿದಾರರ ಪರ ಹಾಜರಿದ್ದ ವಕೀಲ ಎ.ಮೊಹಮ್ಮದ್ ತಾಹೀರ್, ಸರ್ಕಾರ ಮೀಸಲು ನಿಗದಿಪಡಿಸಿದೆಯಾದರೂ ಯಾವಾಗ ಚುನಾವಣೆ ನಡೆಸಲಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಆಕ್ಷೇಪಿಸಿದ್ದರು. ಅದನ್ನು ಪರಿಗಣಿಸಿದ್ದ ನ್ಯಾಯಪೀಠ, ಯಾವಾಗ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಸಲಾಗುತ್ತದೆ ಎಂಬ ಬಗ್ಗೆ ಆ.9ಕ್ಕೆ ಮಾಹಿತಿ ನೀಡಬೇಕು ಎಂದು ಸರ್ಕಾರಕ್ಕೆ ಸೂಚಿಸಿತ್ತು.

# ಸೋಲುವದರಲ್ಲೂ ದಾಖಲೆ ಬರೆದ ಅಭ್ಯರ್ಥಿ




ಚಿಕ್ಕಬಳ್ಳಾಪುರ: ನಿರಂತರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಕಂಡಿರುವುದರಲ್ಲಿ ಗಿನ್ನಿಸ್ ದಾಖಲೆ ಬರೆದಿರುವ ತಮಿಳುನಾಡಿನ ಕೆ.ಪದ್ಮರಾಜನ್ ಹಾದಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಜಿ.ಎನ್.ರವಿ ಸಹ ಸಾಗುತ್ತಿದ್ದಾರೆ.

ಹೌದು! ಸೋಲೋ ಗೆಲುವೋ ಇವರು ಈ ಭಾಗದಲ್ಲಿ ವಿವಿಧ ಚುನಾವಣೆಯಲ್ಲಿ ಮೊದಲಿನಿಂದಲೂ ಸ್ಪರ್ಧಿಸುತ್ತ ಗಮನ ಸೆಳೆಯುತ್ತಿದ್ದಾರೆ. ಅದರಂತೆ ಈ ಬಾರಿಯೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಉಮೇದುವಾ–ರಿಕೆ ಸಲ್ಲಿಸಿದ್ದಾರೆ.ಗೌರಿಬಿದನೂರು ತಾಲೂಕಿನ ಗೊಟಕನಾಪುರದ ನಿವಾಸಿ. ವೃತ್ತಿ ಕೃಷಿ. ಪ್ರವೃತ್ತಿ ಸಮಾಜಸೇವೆ. ಇವರು ಜಿ.ಪಂ, ತಾ.ಪಂ, ಪುರಸಭೆ, ಎಪಿಎಂಸಿ, ಎಂಎಲ್‌ಎ ಸೇರಿ ಪ್ರತಿ ಚುನಾವಣೆಯಲ್ಲೂ ಸ್ಪರ್ಧಿಸಿಕೊಂಂಡು ಬರುತ್ತಿದ್ದಾರೆ. ಒಮ್ಮೆಯೂ ಗೆದ್ದಿಲ್ಲ. ಆದರೆ, ಚುನಾವಣೆ ವೇಳೆ ಸ್ಪರ್ಧೆ, ಪ್ರಚಾರ ವಿಚಾರವಾಗಿ ಸದ್ದು ಮಾಡುತ್ತಿರುತ್ತಾರೆ.

ಪ್ರೌಢ ಶಿಕ್ಷಣ ಪೂರೈಸಿರುವ ಜಿ.ಎನ್.ರವಿ ಮೊದಲು ಗೌರಿಬಿದನೂರು ಕ್ಷೇತ್ರದಲ್ಲಿ ಬಿಜೆಪಿ ಪಕ್ಷದಿಂದ 3 ಬಾರಿ ಜಿ.ಪಂ.ಗೆ ಸ್ಪರ್ಧಿಸಿ ಸೋತಿದ್ದು ಇನ್ನೂ ಜೆಡಿಎಸ್‌ನಿಂದ 1 ಹಾಗೂ ಪಕ್ಷೇತರರಾಗಿ 2 ಬಾರಿ ಜಿ.ಪಂ. ಚುನಾವಣೆಗೆ ಸ್ಪರ್ಧಿಸಿದ್ದಾರೆ. ಪುರಸಭೆ ಚುನಾವಣೆಗೆ ಎರಡು ಬಾರಿ, ತಾ.ಪಂಗೆ ಒಂದು ಬಾರಿ, ಎಪಿಎಂಸಿ ಚುನಾವಣೆಗೆ ಎರಡು ಬಾರಿ ಸ್ಪರ್ಧಿಸಿ ಸೋಲುಂಡಿದ್ದಾರೆ. ಮತ್ತೊಂದೆಡೆ ಪತ್ನಿ ಜಿ.ಎನ್.ಮಂಜುಳಾರವರನ್ನೂ ಎರಡು ಬಾರಿ ಚುನಾವಣೆ ಕಣಕ್ಕಿಳಿಸಿದ್ದು ವಿಶೇಷ.

ಕಳೆದ ನಾಲ್ಕು ವಿಧಾನಸಭೆ ಚುನಾವಣೆಯಿಂದಲೂ ಗೌರಿಬಿದನೂರು ವಿಧಾನಸಭೆ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ರವಿ ಸ್ಪರ್ಧಿಸಿದ್ದು 2008 ರ ಚುನಾವಣೆಯಲ್ಲಿ 699 ಮತ, 2013 ರಲ್ಲಿ 424 ಮತ, 2018 ರ ಚುನಾವಣೆಯಲ್ಲಿ 234 ಮತಗಳು, 2023 ರ ಚುನಾವಣೆಯಲ್ಲಿ 250 ಮತಗಳು ಸಿಕ್ಕಿವೆ. ಇನ್ನೂ ಕಳೆದ 2019 ರ ಲೋಕಸಭಾ ಚುನಾವಣೆಗೆ ಉಮೇದುವಾ–ರಿಕೆ ಸಲ್ಲಿಸಿದಾಗ ಅಸಮರ್ಪಕ ದಾಖಲೆಗಳ ಹಿನ್ನೆಲೆಯಲ್ಲಿ ತಿರಸ್ಕೃತಗೊಂಡಿತ್ತು. ಇನ್ನೂ 2014 ರ ಲೋಕಸಭಾ ಚುನಾವಣೆಯಲ್ಲಿ 7127 ಮತಗಳು, 2009 ರ ಲೋಕಸಭಾ 7955 ಮತಗಳನ್ನು ಪಡೆದಿದ್ದಾರೆ. ಚುನಾವಣೆಗೆ ಸ್ಪರ್ಧಿಸಿದ ಪ್ರತಿ ಬಾರಿಯೂ ಮೂರಂಕಿಯ ಮತಗಳು ಬೀಳುತ್ತಿರುವುದು ಖುಷಿಯ ವಿಚಾರ. ಈಗ ಸೋತರೂ ಭವಿಷ್ಯದಲ್ಲಿ ಮತದಾರರು ಗೆಲ್ಲಿಸುವ ಸಾಧ್ಯತೆ ಇದೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಾರೆ.

# ರಾಜ್ಯದ ಸಮಗ್ರ ಅಭಿವೃದ್ಧಿಗೆ ಬದ್ಧ:ಪರಂ




ತುಮಕೂರು:– ರಾಜ್ಯದ ಸಮಗ್ರ ಅಭಿವೃದ್ಧಿಗೆ ಹಾಗೂ ಜನರ ಆಶಯಕ್ಕೆ ತಕ್ಕಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆಗಳ ಸೌಲಭ್ಯವನ್ನು ತಲುಪಿಸಲು ನಮ್ಮ ಸರ್ಕಾರ ಕಟಿ ಬದ್ಧವಾಗಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದರು.

ಶಿಕ್ಷಣ, ಕ್ರೀಡೆ, ಸಂಸ್ಕೃತಿ, ಕೈಗಾರಿಕೆ, .ಯುವಕರಿಗೆ ಉದ್ಯೋಗ ಸೇರಿದಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕಾರ್ಯೋನ್ಮುಖವಾಗಿದೆ.

ರಾಜ್ಯ ಮತ್ತು ಜಿಲ್ಲೆಯನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ನಿರ್ಮಾಣ ಮಾಡಲು ಶ್ರಮಿಸಲಾಗುತ್ತಿದೆ ಎಂದರು.ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಸ್ವತಂತ್ರ ಭಾರತ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದು ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಮಾಹಿತಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ ಎಂದು ಅವರು ಹೇಳಿದರು.

ದೇಶದ ಪ್ರತಿ ಪ್ರಜೆಯು ಶಾಂತಿ, ಅಹಿಂಸೆ, ಸಹನೆ, ಮಾನವೀಯತೆ ಮತ್ತು ಸಹಬಾಳ್ವೆ ಮುಂತಾದ ಮೂಲ ಮಂತ್ರಗಳನ್ನು ಮೈಗೂಡಿಸಿಕೊಂಡು ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿ ಶಿಕ್ಷಣ, ವೈದ್ಯಕೀಯ, ತಂತ್ರಜ್ಞಾನ, ಆರ್ಥಿಕತೆ, ಕೃಷಿ, ರಾಜಕೀಯ ಕ್ಷೇತ್ರವೂ ಒಳಗೊಂಡಂತೆ ಹಲವಾರು ಕ್ಷೇತ್ರಗಳ ಅದ್ವಿತೀಯ ಸಾಧನೆಯನ್ನು ಮಾಡುತ್ತಾ, ಬಹುದೊಡ್ಡ ಪ್ರಜಾಪ್ರಭುತ್ವ ಮತ್ತು ಗಣತಂತ್ರದ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತಾ, ಅಖಂಡ ಭಾರತದ ಸರ್ವ ಪ್ರಜೆಗಳಿಗೂ ವ್ಯಕ್ತಿ ಗೌರವ, ಸ್ವಾತಂತ್ರ್ಯ–ಸಮಾನತೆ, ಸಾಮಾಜಿಕ ನ್ಯಾಯವನ್ನು ವಿಸ್ತರಿಸುತ್ತಾ ಜಗತ್ತೇ ಹೆಮ್ಮೆ ಪಡುವಂತಹ ರೀತಿಯಲ್ಲಿ ಮುಂದುವರೆಯುತ್ತಿರುವ ರಾಷ್ಟ್ರವಾಗಿ ವಿಶ್ವದಲ್ಲಿ ಗುರುತಿಸಿಕೊಂಡಿದೆ ಎಂದರು.

ಸರ್ಕಾರವು 2024–25ನೇ ಶೈಕ್ಷಣಿಕ ವರ್ಷವನ್ನು ಶೈಕ್ಷಣಿಕ ಬಲವರ್ಧನಾ ವರ್ಷವೆಂದು ಘೋಷಿಸಿದ್ದು, ಶಿಕ್ಷಣದಲ್ಲಿ ಗುಣಾತ್ಮಕತೆ ವೃದ್ಧಿಸುವ ದೃಷ್ಟಿಯಿಂದ ಅನುಭವಾತ್ಮಕ ಕಲಿಕೆ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ಹಾಗೂ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸಲು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಜ್ಞಾನ ಸಂವರ್ಧನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ 29.72 ಕೋಟಿ ರೂ. ವೆಚ್ಚದಲ್ಲಿ 213 ಕೊಠಡಿ, 7.51 ಕೋಟಿ ರೂ. ವೆಚ್ಚದಲ್ಲಿ ಪದವಿಪೂರ್ವ ಕಾಲೇಜುಗಳ 30 ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ 4.90 ಕೋಟಿ ರೂ. ವೆಚ್ಚದಲ್ಲಿ 6 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಗುಬ್ಬಿ ಮತ್ತು ತಿಪಟೂರು ತಾಲ್ಲೂಕಿನ 131 ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅಭಿವೃದ್ಧಿಗೆ 35.45 ಕೋಟಿ ರೂ. ಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.

# ಪಶ್ಚಿಮ ಘಟ್ಟಗಳ ಸಂರಕ್ಷಣೆ ಅತ್ಯಗತ್ಯ

ವಯನಾಡಿನಲ್ಲಿ ಸಂಭವಿಸಿದ ಮಹಾ ದುರಂತಕ್ಕೆ ಇಡೀ ದೇಶವೇ ಮರುಕ ವ್ಯಕ್ತಪಡಿಸಿದೆ. ಸದ್ಯಕ್ಕೆ ಕಾರ್ಯಚರಣೆ ಅಂತಿಂ ಘಟ್ಟ ತಲುಪಿದ್ದು, ಇಡೀ ಗ್ರಾಮಗಳು ಮಣ್ಣಿನಲ್ಲಿ ಕೊಚ್ಚಿ ಹೋಗಿವೆ. ಸದ್ಯ ಅಲ್ಲಿ ಹೊಸದಾಗಿ ಮನೆ ನಿರ್ಮಾಣ, ಸೇತುವೆ, ರಸ್ತೆ, ನೀರಿನ ವ್ಯವಸ್ಥೆ ಹೀಗೆ ಎಲ್ಲವೂ ಹೊಸದಾಗಿ ಆರಂಭವಾಗಬೇಕಿದೆ. ಈ ಬಾರಿಯ ಮಳೆಗಾಲದಲ್ಲಿ ಗುಡ್ಡ ಕುಸಿತ ಪ್ರಕರಣಗಲು ಮರುಕಳಿಸುತ್ತಲೇ ಇವೆ.

ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಶಿರೂರು ಬಳಿಯ ಗುಡ್ಡ ಕುಸಿತದಲ್ಲಿ ಇನ್ನೂ ಕೆಲವರು ಪತ್ತೆಯಾಗಿಲ್ಲ. ಇತ್ತರ ಚಾರ್ಮಾಡಿ ಘಾಟ್, ಶಿರಾಡಿ ಘಾಟ್ ಸೇರಿ ಮಲೆನಾಡು, ಪಶ್ಚಿಮ ಘಟ್ಟ ಸಾಲಿನಲ್ಲಿ ಗುಡ್ಡ ಕುಸಿತದಂತಹ ಪ್ರಕರಣಗಳು ನಡೆಯುತ್ತಲೇ ಇದೆ. ಸದ್ಯ ಇದಕ್ಕೆಲ್ಲ ಕಾರಣ ಹುಡುಕುತ್ತಿದ್ದ ಇಲಾಖೆಗಳು ಹಾಗೂ ಪಶ್ಚಿಮ ಘಟ್ಟ ಉಳಿಸಲು ಅಭಿಯಾನಗಳು, ಜಾಗೃತಿ ಮೂಡಿಸುವ ಕಾರ್ಯಗಳು ನಡೆಯುತ್ತಲೇ ಇವೆ.



ಈಗ ಸರ್ಕಾರ ಪಶ್ಚಿಮ ಘಟ್ಟ ಉಳಿಸುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಅರಣ್ಯ ಅತಿಕ್ರಮಣಗಳ ತೆರವಿಗೆ ಟಾಸ್ಕ್ ಫೋರ್ಸ್ ರಚಿಸಿದೆ. ಹೌದು ರಾಜ್ಯ ಸರ್ಕಾರದ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗಿದ್ದು, 'ಅರಣ್ಯ ಮತ್ತು ಪಶ್ಚಿಮ ಘಟ್ಟಗಳ ಅತಿಕ್ರಮಣ ತೆರವು ಕಾರ್ಯಪಡೆ' ತನ್ನ ಕೆಲಸ ಆರಂಭಿಸಲಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರ ನೇತೃತ್ವದಲ್ಲಿ ಈ ಕಾರ್ಯಪಡೆಯನ್ನು ರಚಿಸಲಾಗಿದ್ದು, ಇಂದಿನಿಂದಲೇ ಪಶ್ಚಿಮ ಘಟ್ಟಗಳು ಮತ್ತು ಇತರ ಘಟ್ಟ ಪ್ರದೇಶಗಳಲ್ಲಿ ಅರಣ್ಯ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಲಿದೆ ಎಂದು ಸಚಿವ ಈಶ್ವರ್ ಖಂಡ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಏನಿದು ಟಾಸ್ಕ್ ಫೋರ್ಸ್..? ಇದರ ಕೆಲಸವೇನು?**

ಈ ಟಾಸ್ಕ್ ಫೋರ್ಸ್ ಸುಮಾರು 10 ಜಿಲ್ಲೆಗಳಲ್ಲಿ ಹರಡಿರುವ ಪಶ್ಚಿಮ ಘಟ್ಟ ಸಾಲು ಪ್ರದೇಶವನ್ನು ಅಧ್ಯಯನ ನಡೆಸಲಿದೆ. ಈ ಮೂಲಕ ಯಾವ ಪ್ರದೇಶದಲ್ಲಿ ಕಾನೂನಾತತ್ಮಕವಾಗಿ ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ನಿರ್ಧ–ರಿಸಲಿದೆ. ಯಾವ ಪ್ರದೇಶದಲ್ಲಿ ಅರಣ್ಯ ಒತ್ತುವರಿ ಇಲ್ಲವೆ ಅತಿಕ್ರಮಣ ಸಂಭವಿಸಿದೆ ಎಂಬುದನ್ನು ಪತ್ತೆ ಮಾಡಿ ತೆರವು ಕಾರ್ಯಾಚರಣೆ ಸಹ ನಡೆಸಲಿದೆ. ಅಲ್ಲದೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ 2015ರ ನಂತರ ತಲೆ ಎತ್ತಿರುವ ಎಲ್ಲ ಅರಣ್ಯ ಒತ್ತುವರಿ ತೆರವಿಗೆ ಆದೇಶ ಹೊರಡಿಸಿ, ಒಂದು ತಿಂಗಳೊಳಗೆ ಕ್ರಮ ಕೈಗೊಂಡ ವರದಿಯನ್ನು ಸಂಬಂಧಿಸಿದ ಇಲಾಖೆಗೆ ಸಲ್ಲಿಸಲಿದೆ.

ಅರಣ್ಯ ಕಾಯ್ದೆ 64ಎಗೆ ಸಂಬಂಧಿಸಿದಂತೆ ಈಗಾಗಲೆ ತಮ್ಮ ಹಕ್ಕು ಪತ್ರಗಳ ಪಡೆದಿರುವವರು ಹಾಗೂ ಈ ಕಾಯ್ದೆಯಡಿ ವರದಿಗಾಗಿ ಕಾಯುತ್ತಿರುವವರಿಗೆ ಈ ಟಾಸ್ಕ್ ಫೋರ್ಸ್‌ನಿಂದ ಸಮಸ್ಯೆಯಾಗುವುದು ದೂರದ ಮಾತು. ಆದ್ರೆ ಪಶ್ಚಿಮ ಘಟ್ಟ ಸಾಲಿನಲ್ಲಿ ವಾಣಿಜ್ಯ ಉದ್ದೇಶದಿಂದಾಗಿ ನಿರ್ಮಿಸಲಾಗಿರುವ ರೆಸಾರ್ಟ್, ಹೋಟೆಲ್, ಹೋಮ್ ಸ್ಟೇ ಸೇರಿದಂತೆ ಕೈಗಾರಿಕೆ ಸಂಬಂಧ ನಿರ್ಮಿಸಲಾಗಿರುವ ಕಟ್ಟಡಗಳು ಸೇರಿ ಅತಿಕ್ರಮಣ ಪ್ರವೇಶ ಮಾಡಿರುವವರಿಗೆ ನೋಟಿಸ್ ಜಾರಿಯಾಗುವ ಜೊತೆಗೆ ಕ್ರಮವೂ ಆಗಲಿದೆ.

ಇನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾ–ರಿಗಳು , ಉಪ ಅರಣ್ಯ ಸಂರಕ್ಷಣಾಧಿಕಾ–ರಿಗಳು, ಅರಣ್ಯ ಸಂರಕ್ಷಣಾಧಿಕಾ–ರಿಗಳು , ಮುಖ್ಯ ಅರಣ್ಯ ಸಂರಕ್ಷಣಾಧಿಕಾ–ರಿಗಳು , ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ಅತಿಕ್ರಮಣ ಪ್ರಕರಣಗಳ ವಿಚಾರಣೆ ಮತ್ತು ವಿನಾಯಿತಿ ನೀಡುವ ಅಧಿಕಾರ ಪಡೆದಿರುತ್ತಾರೆ. ಹೀಗಾಗಿ ಇವರುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಯಾವುದಾದರು ಪ್ರಕರಣಗಳಿದ್ದಾಗ ಆ ಕು–ರಿತ ನಿರ್ಧಾರ ತೆಗೆದುಕೊಳ್ಳಬಹುದು. ಪಶ್ಚಿಮ ಘಟ್ಟದ ರಸ್ತೆಗಳ ನವೀಕರಣ ಮತ್ತು ವಿಸ್ತರಣೆ ಸಂದರ್ಭದಲ್ಲಿ 90 ಡಿಗ್ರಿ ಕೋನದಲ್ಲಿ ಗುಡ್ಡವನ್ನು ಅವೈಜ್ಞಾನಿಕವಾಗಿ ಕಡಿಯುವ ಮೂಲಕ ಭೂಕುಸಿತಕ್ಕೆ ಕಾರಣವಾದುದನ್ನು ಗಮನಿಸಿದ ಸಚಿವರು, ಅಂತಹ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳಿಗೂ ನೋಟಿಸ್ ನೀಡಲಾಗಿದ್ದು, ಕ್ರಮಕೈಗೊಳ್ಳಲು ನಿರ್ದೇಶನ ನೀಡಲಾಗಿದೆ' ಎಂದು ವಿವ–ರಿಸಿದ್ದಾರೆ.

# ಪ್ಯಾರಿಸ್ ಒಲಿಂಪಿಕ್ಸ್‌ಗೆ ಕಲರ್‌ಫುಲ್ ವಿದಾಯ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ (ಯುಎಸ್‌ಎ) ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಸ್ಪರ್ಧೆಯ ಕೊನೆಯ ದಿನದಂದು ಅಮೆರಿಕಾ ತನ್ನ ಸಾಂಪ್ರದಾಯಿಕ ಎದುರಾಳಿ ಚೀನಾವನ್ನು ಒಲಿಂಪಿಕ್ಸ್‌ನಲ್ಲಿ ಅಲ್ಪ ಅಂತರದಿಂದ ಹಿಂದೆ ಹಾಕಿತು.

ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ಬ್ಯಾಸ್ಕೆಟ್‌ಬಾಲ್‌ನ ಅಂತಿಮ ಪಂದ್ಯದಲ್ಲಿ ಆತಿಥೇಯ ರಾಷ್ಟ್ರ ಫ್ರಾನ್ಸ್ ವಿರುದ್ಧ ಯುನೈಟೆಡ್ ಸ್ಟೇಟ್ಸ್ 67–66 ರೋಚಕ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಬಾಸ್ಕೆಟ್‌ಬಾಲ್ ತಂಡ ಚಿನ್ನದ ಪದಕ ಗೆದ್ದುಕೊಂಡಿತು. ಇದರೊಂದಿಗೆ ಅಮೆರಿಕ ಸತತ ನಾಲ್ಕನೇ ಒಲಿಂಪಿಕ್ಸ್‌ನಲ್ಲಿ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 40 ಚಿನ್ನ, 44 ಬೆಳ್ಳಿ ಮತ್ತು 42 ಕಂಚು ಸೇರಿದಂತೆ 126 ಪದಕಗಳೊಂದಿಗೆ ಯುನೈಟೆಡ್ ಸ್ಟೇಟ್ಸ್ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚೀನಾ ತನ್ನ ಒಲಿಂಪಿಕ್ ಅಭಿಯಾನವನ್ನು 40 ಚಿನ್ನದ ಪದಕಗಳೊಂದಿಗೆ ಒಟ್ಟು 91 ಪದಕಗಳೊಂದಿಗೆ ಕೊನೆಗೊಳಿಸಿತು. ಒಲಿಂಪಿಕ್ಸ್‌ನುದ್ದಕ್ಕೂ ಅಮೆರಿಕ ಮತ್ತು ಚೀನಾದಂತಹ ಎರಡು ಕ್ರೀಡಾ ಮಹಾಶಕ್ತಿಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು.

ಡೈವಿಂಗ್ ಮತ್ತು ಕಲಾತ್ಮಕ ಈಜುಗಳಂತಹ ಪೂಲ್ ಈವೆಂಟ್‌ಗಳಲ್ಲಿ ಚೀನಾ ಪ್ರಾಬಲ್ಯ ಹೊಂದಿತ್ತು. ಮತ್ತೊಂದೆಡೆ, ಯುಎಸ್ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಅಸಾಧಾರಣವಾಗಿ ಉತ್ತಮ ಪ್ರದರ್ಶನ ನೀಡಿತು. ಅಥ್ಲೆಟಿಕ್ಸ್‌ನಲ್ಲಿ ಮಾತ್ರ 14 ಚಿನ್ನ, 11 ಬೆಳ್ಳಿ ಮತ್ತು 9 ಕಂಚು ಗೆದ್ದಿತು. ಎಂಟು ಚಿನ್ನ ಸೇರಿದಂತೆ 28 ಪದಕಗಳನ್ನು ಗೆದ್ದುಕೊಂಡಿರುವ ಅಮೆರಿಕ ಈಜುಕೊಳದಲ್ಲೂ ಶಕ್ತಿ ಪ್ರದರ್ಶಿಸಿತು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜಪಾನ್ 20 ಚಿನ್ನ ಸೇರಿದಂತೆ 45 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಮೂರನೇ ಸ್ಥಾನ ಗಳಿಸಿತು. ಆಸ್ಟ್ರೇಲಿಯಾ 18 ಚಿನ್ನದ ಪದಕಗಳೊಂದಿಗೆ ನಾಲ್ಕನೇ ಸ್ಥಾನವನ್ನು ಪಡೆದುಕೊಂಡರೆ, ಆತಿಥೇಯ ಫ್ರಾನ್ಸ್ 16 ಚಿನ್ನದ ಪದಕಗಳೊಂದಿಗೆ ಟಾಪ್–5 ಅನ್ನು ಸೇರಿಕೊಂಡಿತು. ಗ್ರೇಟ್ ಬ್ರಿಟನ್ 14 ಚಿನ್ನದ ಪದಕಗಳೊಂದಿಗೆ ಏಳನೇ ಸ್ಥಾನ ಗಳಿಸಿತು.

ಭಾರತ ತಂಡವು ಒಂದು ಬೆಳ್ಳಿ ಮತ್ತು ಐದು ಕಂಚಿನೊಂದಿಗೆ 71ನೇ ಸ್ಥಾನದಲ್ಲಿದೆ.

ಆದಾಗ್ಯೂ, ಕುಸ್ತಿಪಟು ವಿನೇಶ್ ಫೋಗಟ್ ಅವರು ಮಹಿಳೆಯರ 50 ಕೆಜಿ ಕುಸ್ತಿ ಫೈನಲ್‌ನಲ್ಲಿ ಅನರ್ಹಗೊಳಿಸುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆ. ಅದರ ತೀರ್ಪು ಆಗಸ್ಟ್ 13ರಂದು ಹೊರಬರಲಿದೆ.



ಪಾಕಿಸ್ತಾನವು ಈ ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಅಥ್ಲೆಟಿಕ್ಸ್‌ನಲ್ಲಿ ತನ್ನ ಮೊದಲ ವೈಯಕ್ತಿಕ ಒಲಿಂಪಿಕ್ ಚಿನ್ನದ ಪದಕದೊಂದಿಗೆ 62ನೇ ಸ್ಥಾನವನ್ನು ಗಳಿಸಿತು. ಈ ಬಾರಿ ಒಲಿಂಪಿಕ್ ಪದಕ ಪಟ್ಟಿಯಲ್ಲಿ ಪಾಕಿಸ್ತಾನ ಭಾರತಕ್ಕಿಂತ ಮೇಲೇರಿದೆ ಎಂಬುದು ಗಮನಿಸಬೇಕಾದ ಸಂಗತಿ. ಪುರುಷರ ಜಾವೆಲಿನ್ ಥ್ರೋ ಫೈನಲ್‌ನಲ್ಲಿ ಅರ್ಷದ್ ನದೀಮ್ ಗೆಲುವು ಸಾಧಿಸಿದ್ದು ಪಾಕಿಸ್ತಾನಕ್ಕೆ ಐತಿಹಾಸಿಕ ಕ್ಷಣವಾಗಿದೆ. ಆದರೆ 100ಕ್ಕೂ ಹೆಚ್ಚು ದೇಶಗಳು ಪದಕಗಳ ಖಾತೆಯನ್ನು ತೆರೆಯಲು ಸಾಧ್ಯವಾಗಲಿಲ್ಲ.

- ⇒ ಮನು ಭಾಕರ್: ಮಹಿಳೆಯರ 10 ಮೀ ಏರ್ ಪಿಸ್ತೂಲ್– ಕಂಚು
- ⇒ ಮನು ಭಾಕರ್, ಸರಬ್ಜೋತ್ ಸಿಂಗ್: 10 ಮೀ ಏರ್ ಪಿಸ್ತೂಲ್ (ಮಿಶ್ರ ತಂಡ)– ಕಂಚು
- ⇒ ಸ್ವಪ್ನಿಲ್ ಕುಸಾಲೆ: 50 ಮೀ ರೈಫಲ್ 3 ಸ್ಥಾನ– ಕಂಚು
- ⇒ ಟೀಮ್ ಇಂಡಿಯಾ: ಪುರುಷರ ಹಾಕಿ– ಕಂಚು
- ⇒ ನೀರಜ್ ಚೋಪ್ರಾ: ಪುರುಷರ ಜಾವೆಲಿನ್ ಥ್ರೋ– ಬೆಳ್ಳಿ
- ⇒ ಅಮನ್ ಸೆಹ್ರಾವತ್: ಪುರುಷರ ಕುಸ್ತಿ ಫ್ರೀಸ್ಟೈಲ್ 57 ಕೆ.ಜಿ– ಕಂಚು

## ಗುಡ್ ಬೈ ಪ್ಯಾರಿಸ್

## ಮುಂದಿನ ಒಲಿಂಪಿಕ್ಸ್ ಲಾಸ್ ಏಂಜಲೀಸ್‌ನಲ್ಲಿ

